2. ವರದಿಯನ್ನೊಪ್ಪಿಸುವುದು

ವಿಷಯ: ಖಾಸಗಿ ಸದಸ್ಯರುಗಳ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ ಮೊದಲನೇ ವರದಿಯನ್ನು ಒಪ್ಪಿಸುವುದು

ಅಧ್ಯಕ್ಷರು: ಮಾನ್ಯ ಕೆ.ಜಿ. ಬೋಪಯ್ಯನವರು ಖಾಸಗಿ ಸದಸ್ಯರುಗಳ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ ವರದಿಯನ್ನು ಸದನಕ್ಕೆ ಒಪ್ಪಿಸ ಬೇಕಾಗಿತ್ತು. ಆದರೆ, ಅವರು ಇಲ್ಲದೇ ಇರುವುದರಿಂದ ಸದರಿ ವರದಿಯನ್ನು ಸದನದ ಮುಂದೆ ನಾನೇ ಮಂಡಿಸುತ್ತೇನೆ.

ಅಧ್ಯಕ್ಷರು: (ಉಪಸಭಾಧ್ಯಕ್ಷರು ಹಾಗೂ ಅಧ್ಯಕ್ಷರು, ಖಾಸಗಿ ಸದಸ್ಯರುಗಳ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿ, ಇವರ ಪರವಾಗಿ) ಖಾಸಗಿ ಸದಸ್ಯರುಗಳು ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ ಮೊದಲನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು: ಒಪ್ಪಿಸಲಾಯಿತು.

3. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ:

ವಿಷಯ: ಅರಣ್ಯ ಇಲಾಖೆಗೆ ಸೇರಿದ 250 ಎಕರೆ ಜಮೀನನ್ನು ಕೆಲವು ಪಟ್ಟ ಭದ್ರ ವ್ಯಕ್ತಿಗಳು ಕಬಳಿಸಿರುವುದರ ಬಗ್ಗೆ

ಶ್ರೀ ಹೆಚ್.ಡಿ. ರೇವಣ್ಣ (ಹೊಳೇನರಸಿಪುರ): ಮಾನ್ಯ ಸಭಾಧ್ಯಕ್ಷರೆ, ಇವತ್ತಿನ ದಿವಸ ನಾನು ಬಹಳ ಪ್ರಮುಖವಾದಂಥ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಕರ್ನಾಟಕ ರಾಜ್ಯದ 5 ಕೋಟಿ ಕನ್ನಡಿಗರ ಆಸ್ತಿ ಬಗ್ಗೆ ಅಂದರೆ, ಅರಣ್ಯ ಇಲಾಖೆಗೆ ಸೇರಿದ 250 ಎಕರೆ ಜಮೀನನ್ನು ಕೆಲವು ಪಟ್ಟಭದ್ರ ವ್ಯಕ್ತಿಗಳು ಕಬಳಿಸಿರುವುದರ ಬಗ್ಗೆ ಪರಿಸರವಾದಿಗಳು, ಸಾಹಿತಿಗಳು, ಗಣ್ಯವ್ಯಕ್ತಿಗಳು ಮತ್ತು ಸಾರ್ವಜನಿಕರು ಪ್ರಬಲವಾಗಿ ವಿರೋಧಿಸುತ್ತಾ ಬಂದಿರತಕ್ಕಂಥ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈ ವಿಷಯ ಪ್ರಸ್ತಾಪ ಮಾಡುತ್ತಿರುವ ಹಿಂದೆ ಯಾವುದೇ ರಾಜಕೀಯ ವಿಷಯಗಳು ಇಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಇದರ ಬಗ್ಗೆ ಯಾರು ತಪ್ಪು ತಿಳಿದುಕೊಳ್ಳಬಾರದೆಂಬ ಉದ್ದೇಶದಿಂದ ಹೇಳುತ್ತಿದ್ದೇನೆ. ಮತ್ತೆ ನಾಳೇ ದಿವಸ ರಾಜಕೀಯ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆಂದು ಹೇಳುವುದು ಬೇಡ. ಈ ಸದನದಲ್ಲಿರುವ 224 ಸದಸ್ಯರೆಲ್ಲರೂ ಒಟ್ಟಿಗೆ ಸೇರಿ ಅರಣ್ಯ ಒತ್ತುವರಿ ಇರಬಹುದು ಅಥವಾ ಅರಣ್ಯ ಪ್ರದೇಶ ಲೂಟಿ ಮಾಡುತ್ತಿರುವುದನ್ನು ನಾವೆಲ್ಲ

ಸೇರಿ ಹೋರಾಟ ಮಾಡಿ ಯಾರಾದರೂ ಒತ್ತುವರಿ ಮಾಡಿಕೊಂಡಿದ್ದರೆ ಅದನ್ನು ಬಿಡಿಸುವುದಕ್ಕೆ ಮತ್ತು ಉಳಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮುಖೇನ ಎಲ್ಲರಲ್ಲಿಯೂ ಕೂಡ ಮನವಿ ಮಾಡುತ್ತೇನೆ. ಏಕೆಂದರೆ, ಇವತ್ತಿನ ದಿವಸ ರಾಜ್ಯಾದ್ಯಂತ ಪರಿಸರವಾದಿಗಳು, ಸಾಹಿತಿಗಳು ಹಾಗೂ ಜನಸಾಮಾನ್ಯರು ಅರಣ್ಯ ಉಳಿಸಬೇಕೆಂದು ಪ್ರತಿದಿನ ಹೋರಾಟ ಮಾಡುತ್ತಿದ್ದಾರೆ. ನಾನು ಹೇಳುತ್ತಿರುವ ಅರಣ್ಯ ಪ್ರದೇಶ ಬೆಂಗಳೂರಿನ ಅಂತ್ಯದಲ್ಲಿರುವ ಆಸ್ತಿಯಾಗಿದೆ. ಮತ್ತೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ ಈ ಜಾಗ ಇದೆ. ಇಂಥ ಒಂದು ಅಮೂಲ್ಯ ಬೆಲೆ ಬಾಳುವಂಥ ಆಸ್ತಿಯನ್ನು ಉಳಿಸಬೇಕಾಗಿರತಕ್ಕಂಥದ್ದು ಸರ್ಕಾರದ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ಈ ಜಾಗ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಹೋಬಳಿ, ತೆನೆಯೂರು ಗ್ರಾಮಕ್ಕೆ ಸೇರಿದ 316 ಎಕರೆ 19 ಗುಂಟೆ ಪ್ರದೇಶ. 1965ರಲ್ಲಿ 250 ಎಕರೆ ಪ್ರದೇಶವನ್ನು ಕಂದಾಯ ಇಲಾಖೆಯಿಂದ...

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಇಲಾಖೆ ಸಚಿವರು): ಮಾನ್ಯ ಅಧ್ಯಕ್ಷರೆ, I raise a point of order.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಈಗ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದೇನೆ. ಮಾನ್ಯ ಸಚಿವರಿಗೆ ಹೊಸಕೋಟೆ ವಿಚಾರ ಏಕೆ? ನಾನೇನಾದರು ಮಾನ್ಯ ಬಚ್ಚೇಗೌಡರ ಹೆಸರನ್ನು ಪ್ರಸ್ತಾಪ ಮಾಡಿದ್ದೇನೆಯೇ?

(ಗೊಂದಲ)

ಅಧ್ಯಕ್ಷರು: ಬೇರೆ ಯಾವ ಸದಸ್ಯರು ನಿಂತುಕೊಳ್ಳಬೇಡಿ. ದಯವಿಟ್ಟು ಎಲ್ಲರು ಕುಳಿತುಕೊಳ್ಳಿ, ಮಾನ್ಯ ರೇವಣ್ಣನವರಿಗೆ ಮಾತ್ರ ನಾನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನೇನಾದರೂ ಮಾನ್ಯ ಬಚ್ಚೇಗೌಡರ ಹೆಸರನ್ನು ಹೇಳಿದ್ದೇನೆಯೇ? ಆದ್ದರಿಂದ, ಅವರಿಗೆ ಇದರ ಬಗ್ಗೆ ಅಳಕು ಏಕೆ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು): I raise a point of Order.

ಅಧ್ಯಕ್ಷರು: ಮಾನ್ಯ ಬಚ್ಚೇಗೌಡರೆ, ಒಂದು ನಿಮಿಷ ಇರಿ. ಮಾನ್ಯ ರೇವಣ್ಣನವರೆ, ಮಾತನಾಡುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ. ನಾನು

ಹೇಳುವುದನ್ನು ಕೇಳಿ. Please hear me. ಮಾನ್ಯ ಬಚ್ಚೇಗೌಡರು Point of Order raise ಮಾಡಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ನಾನು ಮಾತನಾಡಿದ ಬಳಿಕ ಅವರು ಹೇಳಲಿ ನಾನೇನು ಬೇಡವೆಂದು ಹೇಳುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು): ನಾನು Point of Order ಅನ್ನು raise ಮಾಡಿದ್ದೇನೆ.

ಅಧ್ಯಕ್ಷರು: ಮಾನ್ಯ ಬಚ್ಚೇಗೌಡರೆ, ನಿಯಮ 69ರ ಮೇರೆಗೆ ಚರ್ಚೆಯಾಗುತ್ತಿರುವ ವಿಷಯದ ಬಗ್ಗೆ ಕೋರ್ಟ್‌ನಲ್ಲಿ ಪ್ರಕರಣ ಇರುವುದರಿಂದ Point of Order ಮೇಲೆ ಇದರ ಬಗ್ಗೆ ಹೇಳುತ್ತೇನೆಂದು ತಾವು ನನಗೊಂದು ಪತ್ರವನ್ನು ಕಳುಹಿಸಿದ್ದೀರಿ. Point of Order ಬಗ್ಗೆ ಹೇಳುವುದಕ್ಕೆ ನಿಮಗೂ ಕೂಡ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು Point of Order raise ಮಾಡಿರುವುದರಿಂದ ಅವರು ಮತ್ತೆ ಚರ್ಚೆಯನ್ನು ಮುಂದುವರಿಸುವುದಕ್ಕೆ ಆಗುವುದಿಲ್ಲ. ಮೊದಲು ನಾನು ಹೇಳುತ್ತೇನೆ. Within two minutes I will complete.

ಅಧ್ಯಕ್ಷರು: ಅವರು ಮೊದಲು ಹೇಳಲಿ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು): ಮಾನ್ಯ ಉಪನಾಯಕರಿಗೆ ಅನುಭವನ ಇದೆ. ನೀವು ಕೂಡ ಇದಕ್ಕೆ ಅಡ್ಡ ಬಂದರೆ ಹೇಗೆ? I don't come in the way.

ಶ್ರೀ ಟಿ.ಬಿ. ಜಯಚಂದ್ರ: ಈಗಾಗಲೇ ಅಜೆಂಡಾದಲ್ಲಿ ಈ ವಿಷಯ ಬಂದಿದೆ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು): Point of Order ಬರುವುದಿಲ್ಲವೆಂಬ ರೀತಿಯಲ್ಲಿ ತಾವು ಹೇಳುತ್ತಿದ್ದೀರಿ. ತಾವು ಈ ರೀತಿ ಮಾತನಾಡಿದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ: ಈ ವಿಚಾರ ಅಜೆಂಡಾದಲ್ಲಿ ಬಂದಿದೆ. Preliminary submission ಅನ್ನು ಮಾನ್ಯ ಸದಸ್ಯರು ಮಾಡುತ್ತಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ: Preliminary submission ಅನ್ನು ಈಗಾಗಲೇ ಮಾಡಿದ್ದಾರೆ. ಅದನ್ನು ರೂಲ್ 69ಗೆ ಕನ್ವರ್ಟ್ ಮಾಡಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಜಯಚಂದ್ರರವರೆ, ಒಂದು ನಿಮಿಷ ಇರಿ. ಅವರು ಇನ್ನು ಮೈನ್ ವಿಚಾರಕ್ಕೆ ಬಂದಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. Rule 327 is very clear. ಅದರಲ್ಲಿ ಏನಿದೆ ಎಂದರೆ "ಸದಸ್ಯರು ಮಾತನಾಡುವಾಗ ಪಾಲಿಸಬೇಕಾದ ನಿಯಮಗಳು:

1) ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿದ್ದು ತೀರ್ಪು ನೀಡಿರದ ಯಾವುದೇ ಸಂಗತಿಯನ್ನು ಕುರಿತು ಮಾತನಾಡತಕ್ಕುದಲ್ಲ.

ಸನ್ಮಾನ್ಯ ನಮ್ಮ ಸಚಿವರು ಏನು ಹೇಳುತ್ತಿದ್ದಾರೆಂದರೆ, The whole matter is before the Court. ಮತ್ತೆ ಅದು adjudication ನಲ್ಲಿರುವಾಗ ಈ ಮನೆಯಲ್ಲಿ ಅದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. Point of order ಇರುವುದು ಬಹಳ ಸೀಮಿತ. ಅವರು ನಮಗೆ ಸೂಚನೆ ಮೂಲ ಕೊಟ್ಟಿರುವ ಮುಖ್ಯ ವಿಚಾರ ಏನಿದೆ, it is before the Court. ಕೋರ್ಟ್‌ನಲ್ಲಿ ವಿಚಾರಣೆಗಾಗಿ ಕಾಯುತ್ತಿದೆ. ನಾನು ಈಗಾಗಲೇ ಹೇಳಿದ ಹಾಗೆ, ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿದ್ದು ತೀರ್ಪು ನೀಡಿರದ ಯಾವುದೇ ಸಂಗತಿಯನ್ನು ಕುರಿತು ಮಾತನಾಡತಕ್ಕುದಲ್ಲವೆಂದು ನಿಯಮ 327(1)ರಲ್ಲಿ ಇದೆ. ಇದನ್ನು ನಾವು follow ಮಾಡಬೇಕಿಲ್ಲವೆ?

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರು ಈಗ ಹೇಳಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ನಿಮಗೆ ಮನವರಿಕೆ ಮಾಡಿಕೊಡುತ್ತೇನೆ.

ಅಧ್ಯಕ್ಷರು: ಕಾನೂನು ಸಚಿವರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಅವರು ಹೇಳುತ್ತಾರಂತೆ. ಆದ್ದರಿಂದ, ಅವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕಾನೂನು ಸಚಿವರ ಗಮನಕ್ಕೆ ನಾನು ತರುವುದೇನೆಂದರೆ, ಅಲ್ಲಿ 316.19 ಎಕರೆ ಸರ್ಕಾರಕ್ಕೆ ಸೇರಿದ ಗೋಮಾಳ ಜಮೀನು ಇದೆ. ಇದರಲ್ಲಿ 250 ಎಕರೆ ಜಮೀನನ್ನು 1965ರಲ್ಲಿ ಅರಣ್ಯ ಇಲಾಖೆಗೆ ಕೊಡಲಾಗಿದೆ. ಈ ಲ್ಯಾಂಡ್‌ನ್ನು ಆಗ ತಹಶೀಲ್ದಾರ್ ಕೊಟ್ಟಿದ್ದಾರೆ ಹೊರತು ನಾನಲ್ಲ. 2008ರಲ್ಲಿ ಕ್ರೈಂ ನಂ. 6/2008, ಸೂಲಿಬೆಲೆ ಪೊಲೀಸ್ ಠಾಣೆ. ಬಿ.ಎನ್. ಭೈರೇಗೌಡ and others, complaint ಬೆಳ್ಳಿಯಪ್ಪ, ಮೇಲುಕೊಪ್ಪ ಅಧೀಕ್ಷಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ,

ಶ್ರೀನಿವಾಸಪುರ ರೇಂಜ್, 63 ಎಕರೆ ಜಮೀನನ್ನು ಒತ್ತುವರಿ ಮಾಡಿರುವ ಬಗ್ಗೆ W.S. 114, 441, 426, 35306 IPCನಲ್ಲಿ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಇದನ್ನು ನಾನು ಮಾಡಿಲ್ಲ, ಅರಣ್ಯ ಇಲಾಖೆಯವರು ಕೇಸ್ ರಿಜಿಸ್ಟರ್ ಮಾಡಿರುವುದನ್ನು ಮಾನ್ಯ ಕಾನೂನು ಸಚಿವರ ಗಮನಕ್ಕೆ ತರುತ್ತಿದ್ದೇನೆ. ಗೋಮಾಳ ಜಮೀನನ್ನು ಯಾರಿಗೂ ಕೊಡಬಾರದೆಂದು ಸರ್ಕಾರ ಕಾನೂನು ಮಾಡಿದೆ. ಇದೆ ಬಗ್ಗೆ ಇನ್ನು ಎರಡು ನಿಮಿಷದಲ್ಲಿ ನಿಮಗೆ ಮನವರಿಕೆ ಮಾಡುತ್ತೇನೆ. ಕಾನೂನು ಸಚಿವರ ರೀತಿಯಲ್ಲಿ ನನಗೆ ವಾದ ಮಾಡುವ ಶಕ್ತಿ ನನಗೆ ಇಲ್ಲ. ವಾದ ಮಾಡುವುದಕ್ಕೆ ಮಾನ್ಯ ಸುರೇಶ್ ಕುಮಾರ್‌ರವರಷ್ಟು ನಾನು ಬುದ್ಧಿವಂತನಲ್ಲ. ನಿಮ್ಮ ಗಮನಕ್ಕೆ ಎರಡು ವಿಷಯ ತರುತ್ತೇನೆ. ಈಗ 250 ಎಕರೆ ಜಮೀನನ್ನು ತಹಸೀಲ್ದಾರ್ ಮತ್ತು ಸಂಬಂಧಪಟ್ಟ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಸೇರಿಕೊಂಡು ಲೂಟಿ ಮಾಡುವುದಕ್ಕೆ ಬಿಡುತ್ತೀರಾ? ಕೋರ್ಟಿನಲ್ಲಿದೆ ಎಂದು ಲೂಟಿ ಮಾಡುವುದಕ್ಕೆ ಬಿಟ್ಟು ಬಿಡುತ್ತೀರಾ? Protection ಇದೆಯಾ ನಿಮ್ಮದು? ಒಂದು ನಿಮಿಷ ಹೇಳುತ್ತೇನೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: When the matter is before the Court, ಕೋರ್ಟಿನಲ್ಲಿ ಇರುವಾಗ ಇಲ್ಲಿ ಮಾತನಾಡಬಹುದಾ? ಬಹಳ ಇದು. Simple ಮಾನ್ಯ ಸಭಾಧ್ಯಕ್ಷರು ಚರ್ಚೆ ಮಾಡಬಹುದು ಎಂದು ರೂಲಿಂಗ್ ಕೊಟ್ಟು ಬಿಟ್ಟರೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಕೋರ್ಟಿನಲ್ಲಿ ಇರುವ ವಿಷಯದ ಬಗ್ಗೆ ಬಿಟ್ಟು ಮಾತನಾಡುತ್ತೇನೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್: Hoskote JMFCಯಲ್ಲಿ Original Suit No. 332/2009, when the matter is pending, ಚರ್ಚೆ ಮಾಡುವುದಕ್ಕೆ ಅದು ಹೇಗೆ ಸಾಧ್ಯ?

ಶ್ರೀ ಹೆಚ್.ಡಿ. ರೇವಣ್ಣ: ನಾನು ಮಾನ್ಯ ಸಚಿವರ ಹತ್ತಿರ ಹೇಳಿಸಿಕೊಳ್ಳಬೇಕೇ? ನಾನು ಕೋರ್ಟಿನಲ್ಲಿರುವ ವಿಷಯದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಬಚ್ಚೇಗೌಡರೆ, ಅವರು ಈ ಗೋಮಾಳ ಜಮೀನಿನ ಒಂದು ಇಸ್ಯೂ ಬಗ್ಗೆ ರೇಸ್ ಮಾಡುತ್ತಿದ್ದಾರೆ. ನಾನು ಹೇಳುವುದನ್ನು ಎಲ್ಲರೂ ಒಂದು ನಿಮಿಷ ಕೇಳಿ. ಎಲ್ಲರೂ ಏಕೆ patience ಕಳೆದುಕೊಳ್ಳುತ್ತೀರಿ. ಸಾರ್ವಜನಿಕ ಹಿತಾಸಕ್ತಿ ಇರುವಂಥ ವಿಷಯ, ಇದರ ಬಗ್ಗೆ ಬೆಳಕು ಚೆಲ್ಲುವುದಕ್ಕೆ ಅವಕಾಶ ಇದೆ. ಈಗ ಕೋರ್ಟಿನಲ್ಲಿ ಇರುವಂಥ matter ಬಗ್ಗೆ ಎತ್ತಲಿಕ್ಕೆ ಆಗುವುದಿಲ್ಲವೆನ್ನುವುದನ್ನು ಮಾನ್ಯ ಸುರೇಶ್ ಕುಮಾರವರು ಹೇಳಿದರು. Ok, ಒಪ್ಪಿಕೊಳ್ಳೋಣ, ನಿಮ್ಮದು point of order ಇದೆ. ಈಗ ಕೋರ್ಟಿನಲ್ಲಿರತಕ್ಕಂಥ subject matter ಏನಿದೆ? Cause of action ಏನಿದೆ? ಅಲ್ಲಿ ಏನು dispute ಇದೆ, ಯಾರು ಕೋರ್ಟಿಗೆ ಹೋಗಿದ್ದಾರೆ. ಅದರ ಬಗ್ಗೆ ನೀವು ಏನಾದರೂ ಹೇಳುತ್ತೀರಾ? ನೀವು ಅದನ್ನು ಹೇಳಿ. ಕೋರ್ಟಿಗೆ ಸರ್ಕಾರದವರು ಹೋಗಿದ್ದಾರೋ ಅಥವಾ ಖಾಸಗಿ ವ್ಯಕ್ತಿಗಳು ಹೋಗಿದ್ದಾರೋ? ಅರಣ್ಯ ಇಲಾಖೆಯವರು ಕೋರ್ಟಿಗೆ ಹೋಗಿದ್ದಾರಾ? ಆ ವಿಷಯವನ್ನು ನೀವು ಹೇಳಿದರೆ, ಮುಂದೆ ಇದು discussionಗೆ ಬರುತ್ತದೆ. ಮಾನ್ಯ ಬಚ್ಚೇಗೌಡರೆ, ಎಲ್ಲರೂ ಅರ್ಜಂಟಿನಲ್ಲಿದ್ದೀರಿ.

ಶ್ರೀ ಬಿ.ಎನ್. ಬಚ್ಚೇಗೌಡ: ನೀವು permission ಕೊಟ್ಟರೆ ಹೇಳುತ್ತೇನೆ.

ಅಧ್ಯಕ್ಷರು: ಅರಣ್ಯ ಇಲಾಖೆಯವರು ಅಥವಾ ಕಂದಾಯ ಇಲಾಖೆಯವರು ಕೋರ್ಟಿಗೆ ಹೋಗಿದ್ದಾರೋ, ಅರಣ್ಯ ಇಲಾಖೆಯವರು ಕೋರ್ಟಿಗೆ ಹೋಗಿದ್ದಾರೆಂದು ಹೇಳಿದರು. ಕೋರ್ಟಿನಲ್ಲಿರುವ ಪ್ರಕರಣ ಏನಿದೆ, ಅದನ್ನು discussion ಮಾಡುವುದರಿಂದ ಇಲ್ಲಿ affect ಆಗುತ್ತದೆಯೋ ಏನೋ ನೋಡೋಣ. ಏನು affect ಆಗುವುದಿಲ್ಲವೆಂದರೆ discussion ಗೆ ಅವಕಾಶವನ್ನು ಕೊಡುತ್ತೇನೆ. ಅದು ಏನಾದರೂ prejudice ಆದರೆ ಅದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಅವರು ಹೇಳುವುದನ್ನು ಕೇಳಿ, ಅವರು ಕೋರ್ಟಿನಲ್ಲಿರುವ matter ಬಗ್ಗೆ explain ಮಾಡಿ ಹೇಳಲಿ. ಅದರಿಂದ ಇಲ್ಲಿ ಏನಾದರೂ ಪರಿಣಾಮ ಆಗುವುದಾದರೆ ನಾನು ಅವಕಾಶವನ್ನು ಕೊಡುವುದಿಲ್ಲ. ಏನು ಪರಿಣಾಮ ಆಗುವುದಿಲ್ಲವೆಂದರೆ ಅವಕಾಶವನ್ನು ಕೊಡುತ್ತೇನೆ. ಸರ್ಕಾರಕ್ಕೆ ಉಳಿಯಬೇಕು ಎನ್ನುವ ಒತ್ತಾಯ ನಿಮ್ಮದೆ ಇದೆ. ಅದು ಏನು ಪ್ರಕರಣ ಇದೆ ಅದನ್ನು ಕೇಳೋಣ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ರೇವಣ್ಣನವರು ಹೇಳಿದ ಹಾಗೆ ಇದು 316.19 ಎಕರೆ ಜಮೀನು ಇರುವುದು. ಇದರ ಬಗ್ಗೆ details ಹೇಳುವುದಕ್ಕೆ ನಾನು ಹೋಗುವುದಿಲ್ಲ. ಇದು 1930ನೇ ಇಸ್ವಿಯಿಂದ 17ನೇ ಸರ್ವೆ ನಂಬರ ಹೊಸಕೋಟೆ ತಾಲ್ಲೂಕಿನ ತೆನೆಯೂರು ಗ್ರಾಮದಲ್ಲಿ ಆಗಿರುವ ಗ್ರಾಂಟ್ಸ್ ಇದು, not 1 ro 2 acres. From 1930 to till 2005ವರೆಗೂ grants ಕೊಟ್ಟುಕೊಂಡು ಬಂದಿದ್ದಾರೆ. 137 ಎಕರೆ ಗ್ರಾಂಟ್ಸ್ ಆಗಿರುವಂಥದ್ದು. 316 ಎಕರೆಯಲ್ಲಿ 179 ಎಕರೆ ಅವರದ್ದು ಇರುವಂಥದ್ದು. ಅದರಲ್ಲಿ ಅವರಿಗೆ ಪಹಣಿ ವಗೈರೆ ಇರುವಂಥದ್ದು ಫಾರೆಸ್ಟ್‌ಗೆ 150 ಎಕರೆ ಮಾತ್ರ. 250 ಎಕರೆ ಇವರಿಗೆ ಕೊಟ್ಟರು ಎನ್ನುವುದರ ಬಗ್ಗೆ ಯಾವ ದಾಖಲಾತಿಗಳು ಇಲ್ಲ, ಎಲ್ಲಾ ಇನ್ನು ಬೇಕಾದಷ್ಟು ಇದೆ ಸ್ವಾಮಿ. My point of order is confined to ಹೊಸಕೋಟೆ JMFC ನ್ಯಾಯಾಲಯದಲ್ಲಿ ಅರಣ್ಯ ಇಲಾಖೆಯವರು, petitioner. ಈ ಪ್ರಕರಣದ ಸಂಖ್ಯೆ: OS No. 332/2009ನ್ನು, 2004--05ರಲ್ಲಿ ಅಕ್ರಮ ಸಕ್ರಮ ಮಂಜೂರಾತಿ ಆಗಿರುವುದರ ವಿರುದ್ಧ ದಾಖಲು ಮಾಡಿದ್ದು ಈ ಪ್ರಕರಣದ ತಾರೀಖು 6–4–2006ನೇ ಇಸ್ವಿಯಲ್ಲಿ ತಾತ್ಕಾಲಿಕ ಆದೇಶ ನೀಡಲಾಗಿದೆ. ಯಾರು ಪ್ರವೇಶ ಮಾಡಬಾರದೆಂದು ಆದೇಶವನ್ನು ನೀಡಿದ್ದಾರೆ.

ಅಧ್ಯಕ್ಷರು: ಅರಣ್ಯ ಇಲಖೆಯವರು ಕೊಟ್ಟಿರುವ complaint ಮೇಲೆ ತಾತ್ಕಾಲಿಕ ಆದೇಶ ನೀಡಿದ್ದಾರಾ? ಅದನ್ನು challenge ಮಾಡಿ ಇವತ್ತು ಕೋರ್ಟಿನಲ್ಲಿ ಕೇಸ್ ಪೆಂಡಿಂಗ್ ಇದೆ.

ಶ್ರೀ ಬಿ.ಎನ್. ಬಚ್ಚೇಗೌಡ: ಪೆಂಡಿಂಗ್ ಇದೆ. 2^{nd} thing is, a declaration suit in O.S. number N.A. 38/2009 farmers, against that they have preferred a petition. ಆ ನಂಬರ ಪ್ರಕಾರ ಬೆಂಗಳೂರಿನ ಸಿವಿಲ್ ನ್ಯಾಯಾಲಯದಲ್ಲಿ ದಾಖಲಾಗಿದೆ.

ಅಧ್ಯಕ್ಷರು: ಅಲ್ಲಿ subject matter ಏನಿದೆ. ಅಲ್ಲಿ ರೈತರು ಏನು claim ಮಾಡಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ: Same thing, ನಮ್ಮ, grantees, ನಾವು ಬೋರ್‌ವೆಲ್ ಹಾಕಿದ್ದೇವೆ, ಅಲ್ಲಿ 1940 ಯಿಂದ ಸಾಗುವಳಿ ಮಾಡುತ್ತಿದ್ದೇವೆ. Till now we are cultivating. ಮೊನ್ನೆ ನಾನು ನೋಡಿದ್ದೇನೆ.

ಅಧ್ಯಕ್ಷರು: Case file ಮಾಡಿ ಎಷ್ಟು ವರ್ಷವಾಯಿತು?

ಶ್ರೀ ಬಿ.ಎನ್. ಬಚ್ಚೇಗೌಡ: 6–8–2009ನಲ್ಲಿ ಮಾಡಿರುವುದು.

ಅಧ್ಯಕ್ಷರು: 2009ನಲ್ಲಿ ಮಾಡಿದ್ದಾರಾ?

ಶ್ರೀ ಬಿ.ಎನ್. ಬಚ್ಚೇಗೌಡ: ಹಿಯರಿಂಗ್ ಇರುವುದು.

ಅಧ್ಯಕ್ಷರು: ಹಿಯರಿಂಗ್ ಆಯಿತು, ಕೇಸ್ ದಾಖಲಾಗಿ ಎಷ್ಟು ವರ್ಷವಾಯಿತು?

ಶ್ರೀ ಬಿ.ಎನ್. ಬಚ್ಚೇಗೌಡ: File ಮಾಡಿದ್ದು same ಈ O.S. ಆದ ಮೇಲೆ ಸ್ವಾಮಿ. 2004–05ರಲ್ಲಿ 6–4–2009 ಆದ ಮೇಲೆ ಫೈಲ್ ಮಾಡಿದ್ದು.

ಅಧ್ಯಕ್ಷರು: ತಾವು ಕೇಸ್ ನಂಬರ್ ಹೇಳಿದರೆ ಯಾವ ಇಶ್ಯಿಯಲ್ಲಿ ದಾಖಲಾತಿಯಾಗಿದೆ ಅದು ಗೊತ್ತಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ: 2008–09ರಲ್ಲಿ ಆಗಿರುವುದು. O.S. No. 38, NA. 2008-09.

Mr. Speaker: Is it the suit for declaration?

ಶ್ರೀ ಕೆ.ಎಂ. ಶಿವಲಿಂಗೇಗೌಡ: ದಾಖಲಾತಿ ಆಗಿದೆ ಎಂದರೆ ಆಗುವುದಿಲ್ಲ. ಆಗಿರುವುದಕ್ಕೆ ದಾಖಲೆ ಕೊಡಬೇಕು.

ಅಧ್ಯಕ್ಷರು: ಕೊಡಿ ಎಂದು ಕೇಳೋಣ. ನಾನು ಕೇಳುತ್ತಿದ್ದೇನೆ. ಎಲ್ಲರೂ ಒಂದೇ ಸಲ ಎದ್ದು ನಿಂತುಕೊಂಡು ಕೇಳಿದರೆ ಹೇಗೆ? ಏಕೆ ಅವಸರವನ್ನು ಮಾಡುತ್ತಿದ್ದೀರಿ? ನಿಮಗೆ ಈ matter discussion ಆಗಬೇಕೋ ಬೇಡವೋ? ದಾಖಲು ಮಾಡಿಲ್ಲದಿದ್ದರೆ ಮಾಡಿಲ್ಲವೆಂದು ನೀವು ಹೇಳಿ. You deny it.

ಶ್ರೀ ಬಿ.ಎನ್. ಬಚ್ಚೇಗೌಡ: ಇದು ದಾಖಲಾಗಿದೆ. ಅದರ ಕಾಪಿ ನಿಮಗೆ ಕಳುಹಿಸಿ ಕೊಡುತ್ತೇನೆ.

ಅಧ್ಯಕ್ಷರು: ಕೊಡಿ, suit ನಲ್ಲಿ prayer ಏನಿದೆ? ಅವರು ಅದರಲ್ಲಿ ಏನು ಪ್ರಾರ್ಥನೆ ಮಾಡಿದ್ದಾರೆ?

ಶ್ರೀ ಬಿ.ಎನ್. ಬಚ್ಚೇಗೌಡ: ಪ್ರಾರ್ಥನೆ, ನಾವು possession ನಲ್ಲಿದ್ದೇವೆ, ನಮಗೆ ಮಂಜೂರಾತಿ ಆಗಿದೆ, ನಾವು ಸಾಗುವಳಿದಾರರು, ನಮಗೆ ರಕ್ಷಣೆ ಕೊಡಬೇಕೆಂದು ಹೇಳಿ. O.S. file ಮಾಡಿದ್ದಾರೆ ಸ್ವಾಮಿ.

ಅಧ್ಯಕ್ಷರು: ಆ ದಾಖಲೆ ಬಗ್ಗೆ ತಾವು ಏನು ಹೇಳುತ್ತೀರಿ? ಅವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಬಿ.ಎನ್. ಬಚ್ಚೇಗೌಡ: ನನ್ನ point of order ಬಗ್ಗೆ clear ಮಾಡಿ ಬಿಡುತ್ತೇನೆ ಸ್ವಾಮಿ. Why it is prejudicial or adjudicationನಲ್ಲಿ ಮಧ್ಯೆ

ಬರುತ್ತದೆ ಅನ್ನುವುದಕ್ಕೆ Kaul and Shekdhar ನಲ್ಲಿ, one such restriction is that ' the discussion on matters pending adjudication before Courts of law should be avoided on the floor of the House, so that the Courts function is uninfluenced by anything said outside the ambit of trial in dealing with such matters. Then, further in case, the Chair holds that a matter is subjudice the effect of this ruling is that, discussion on that matter is postponed judgment in the court is delivered. 'Next subjudice, 'In Civil Court from the time issues are same, till judgment is delivered subjudice is there.' ತಮಗೆ ಇದರ ಬಗ್ಗೆ ಎಲ್ಲಾ ಗೊತ್ತಿದೆ. It is clear. ಇದರ ಜೊತೆಗೆ ಇದೇ ಸದನದಲ್ಲಿ ಸಾಕಷ್ಟು ಇಂಥದ್ದರ ಬಗ್ಗೆ ತೀರ್ಮಾನವಾಗಿರುವುದು ತಮಗೆ ಗೊತ್ತಿದೆ. There are many decisions. ತಮಗೆ ಬೇಕಾದರೆ ನಾನು ಓದುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ತಾವು ವಕೀಲರಾಗಿದ್ದೀರಿ, ನಾನು ಕೂಡ ವಕೀಲನಾಗಿದ್ದೇನೆ. ಮಾನ್ಯ ಬಚ್ಚೇಗೌಡರು ಸಹ ವಕೀಲರಾಗಿದ್ದರು. ತಾವು ಓದಿರುವುದು relevant ಆಗಿರುವಂತಹದ್ದನ್ನು ಓದುತ್ತೇನೆ. ತಮಗೆ ಅನುಕೂಲವಾಗಲೆಂದು ಓದುತ್ತೇನೆ.

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ, ತಾವು ಹೇಳಿ, ನಿಮಗೆ ಅನುಕೂಲವಾಗಿರುವುದನ್ನು ನೀವು ಹೇಳಿ, ಅವರಿಗೆ ಅನುಕೂಲವಾಗುವುದನ್ನು ಅವರು ಹೇಳುತ್ತಾರೆ.

Sri T.B. Jayachandra: Subjudice ಆಗುವಂತಹ ವಿಚಾರದಲ್ಲಿ ತಾವು ಏನು ಆಕ್ಷೇಪವನ್ನು ಎತ್ತಿದ್ದೀರಿ. ನೀವು ಓದುತ್ತಿದ್ದ ಪುಸ್ತಕವನ್ನೇ ನಾನು ಓದುತ್ತಿದ್ದೇನೆ. ಆದರೆ ಬೇರೆ ಪೇಜ್‌ನ್ನು ಓದುತ್ತಿದ್ದೇನೆ. 'The rule has been extended to the matters pending before the Parliamentary Committee, the statutory Tribunal, Statutory Authority performing any judicial or quasi-judicial functions or any functions or Court of enquiry appointed enquiring into it or investigating any matter, such matters are not ordinarily raised by way of question, an adjournment motion, a resolution motion or cut motion, the Speaker may however, admit the question in case if it refers to a matter concerned with the

procedure or subject to a State of enquiry if it is not likely to prejudice the consideration of the matter by the Tribunal or the Commission'. What does it mean? ನೀವು ಹಾಕಿರುವಂತಹದ್ದು ಏನು 8 ಅಥವಾ 9 ರಲ್ಲೊ ಒಂದು Original Suit ಹಾಕಿದ್ದೀರಿ. ಇದನ್ನು ಯಾರಾದರೂ ಹಾಕಲಿ ಕೇಳಿ, ಕೇಳಿ. Original suit for a Temporary injunction or a Permanent Injunction or a Forest Department filing a case, ಇಲ್ಲಿ ಈ ಸದನದಲ್ಲಿ ಚರ್ಚೆಯಾಗವುದು ಯಾವ ರೀತಿಯಾಗಿ prejudice ಆಗುತ್ತದೆ ಸ್ವಾಮಿ. ಕೇಳಿ. It is a purely a civil case.

Sri B.N. Bachegowda (Minister for Labour) : It will have a influence on the ordinance or I.A... It will influence. ತಾವು ವಕೀಲರಾಗಿದ್ದೀರಿ. It will have a influence on the Court. That should not be there. Let there be fairness in it.

Sri T.B. Jayachandra: It is a civil matter.

Sri B.N. Bachchegowda: Yes.

Sri T.B. Jayachandra: It is a civil matter.

Sri B.N. Bachchegowda: Let there be fairness in it.

Sri T.B. Jayachandra: It is a civil matter.

Sri B.N. Bachchegowda: Yes.

ಶ್ರೀ ಟಿ.ಬಿ. ಜಯಚಂದ್ರ: ಇದು injunction matter. ನೋಡಿ ನೀವು ಆ ತರಹ ಲೆಕ್ಕವನ್ನು ಹಾಕಿಕೊಂಡು ಹೋದರೆ...

ಅಧ್ಯಕ್ಷರು: Suit file ಮಾಡಿದ್ದಾರಲ್ಲಾ ಆ ಕಾಪಿಯನ್ನು ಕೊಡಿ.

ಶ್ರೀ ಬಿ.ಎನ್. ಬಚ್ಚೇಗೌಡ: ಕೊಡುತ್ತೇನೆ ಸ್ವಾಮಿ.

ಅಧ್ಯಕ್ಷರು: ಆ ಕಾಪಿಯನ್ನು ಕಳುಹಿಸಿಕೊಡಿ.

ಶ್ರೀ ಬಿ.ಎನ್. ಬಚ್ಚೇಗೌಡ: ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ರಾಮಸ್ವಾಮಿಯವರ ವರದಿಯಲ್ಲಿ ಸಾವಿರಾರು ಎಕರೆಯ ಬಗ್ಗೆ ಇದೆ ಎಲ್ಲವೂ ಕೂಡ ಕೋರ್ಟಿನಲ್ಲಿದೆ. ಹಾಗಾದರೆ ಚರ್ಚೆ ಮಾಡುವುದಕ್ಕಾಗುವುದಿಲ್ಲವೇ? ನೀವು ಒಂದು Civil litigation ಇದೆ

ಎನ್ನುವ ಕಾರಣಕ್ಕೋಸ್ಕರ ಅದು subjudice ಆಗುತ್ತದೆ ಎನ್ನುವುದಾದರೆ ಅದು ತಪ್ಪು. ಅದು subjudice ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ: No, ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ನಾನು ಮುಗಿಸಿದ ನಂತರ ತಾವು ಮಾತನಾಡಿ. ನಾನು ಕಳೆದ 32 ವರ್ಷಗಳಿಂದಲೂ ಅಸೆಂಬ್ಲಿಯಲ್ಲಿದ್ದೇನೆ. ನಾನು ಸಾಕಷ್ಟು ಸಾರಿ ನೋಡಿದ್ದೇನೆ. ಬಹುಶಃ ಇಂತಹ ವಿಚಾರಗಳು ಚರ್ಚೆಯಾಗಿ Speaker ರವರು ruling ಕೊಟ್ಟಿರುವಂತಹ ನಿರ್ದೇರ್ಶನಗಳು ಇಲ್ಲವಾ? ನಿರ್ದೇಶನಗಳು ಇದೆ. ಏಕೆ ಸುಮ್ಮನೆ ನೀವು unnecessary ಆಗಿ...

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, before goint to the subjudice and other things, please guide me. ಆ 327(1)ರಲ್ಲಿ ಇರುವುದನ್ನು ನಮ್ಮ ಸದನವು ಯಾವ ರೀತಿಯಾಗಿ interpret ಮಾಡಬೇಕು? ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿದ್ದು ತೀರ್ಪು ನೀಡಿರದ ಯಾವುದೇ ಸಂಗತಿಯನ್ನು ಕುರಿತು ಸದಸ್ಯರು ಮಾತನಾಡತಕ್ಕದ್ದಲ್ಲ. How it should interpret ?

ಶ್ರೀ ಟಿ.ಬಿ. ಜಯಚಂದ್ರ: ಯಾವುದು ಹೇಳಿ?

Sri S. Suresh Kumar: Rule 327-'Rules to be observed while speaking. A member while speaking shall not refer to any matter of fact on which a judicial decision is pending.' How we should interpret? Please guide me.

ಶ್ರೀ ಟಿ.ಬಿ. ಜಯಚಂದ್ರ: ನೀವು ಅದನ್ನೆ ಆಧಾರ ಇಟ್ಟುಕೊಳ್ಳುವುದಾದರೆ...

ಶ್ರೀ ಎಸ್. ಸುರೇಶ್‌ಕುಮಾರ್: ಅದು ಬೇಡ. ಇದನ್ನು interpret ಹೇಗೆ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ: ಅದನ್ನು ಆಧರಿಸಿಯೇ Kaul & Shekdhar ನಲ್ಲಿ ಬರೆದಿರುವುದು. ಅಯಿತು ಈ ಸದನದಲ್ಲಿ ಇಂತಹ ಸಂದರ್ಭಗಳು ಸಾಕಷ್ಟು ಸಲ ಎದುರಾಗಿವೆ. ಇವತ್ತು ಕೋರ್ಟಿನಲ್ಲಿ speaker ರವರು decision ಕೊಟ್ಟಿರುವುದನ್ನು allow ಮಾಡಿರುವಂತಹದ್ದು ಇದೆಯಲ್ಲಾ. ನಮ್ಮ ಚರ್ಚೆಯಿಂದಾಗಿ judiciary ಮೇಲೆ influence ಆಗುವಂತಹ ಸಂದರ್ಭ ಇದ್ದಾಗ ಮಾತ್ರ ಅದು ಸಾಧ್ಯವಾಗುತ್ತದೆಯೇ ವಿನಃ ಬೇರೆ ಸಂದರ್ಭದಲ್ಲಿ ಆಗುವುದಕ್ಕೆ ಸಾಧ್ಯವಿಲ್ಲ. It is purely a civil matter. It is an injunction

matter. Injunction matter ದೊಡ್ಡ influence ಆಗುತ್ತದೆ ಎಂದು ಹೇಳಿ ನೀವು ವ್ಯಾಖ್ಯಾನ ಮಾಡುವುದಾದರೆ ಏನು ಇದರರ್ಥ?

Sri S. Suresh Kumar: Rule is very clear.
ಶ್ರೀ ಟಿ.ಬಿ. ಜಯಚಂದ್ರ: ಅದನ್ನೆ ನಾನು ಹೇಳುತ್ತಿರುವುದು.

Sri T.B. Jayachandra: Just because it is pending…
ಶ್ರೀ ಎಸ್. ಸುರೇಶ್ ಕುಮಾರ್: ಇದನ್ನು ಮುಂದುವರಿಸಬೇಕಾದರೆ, Hon'ble Speaker, should use his discretion. He should give a ruling. Let him give a ruling.
ಶ್ರೀ ಟಿ.ಬಿ. ಜಯಚಂದ್ರ: ಅದನ್ನೆ ನಾನು ಹೇಳುತ್ತಿರುವುದು. ಈಗ ಹಿಂದೆ ಸಾಕಷ್ಟು ಸಾರಿ ಆಗಿದೆ. ಈಗ ನಾನು ತಮ್ಮನ್ನು convince ಮಾಡುವಂತಹದ್ದು, that 'Chair has to see the House is not debarred from discussion any matter of public importance, on the ground that the similar allied linked matter is before Court of Law." ನಾನು ಒಂದೇ ಹೇಳುತ್ತೇನೆ. ಈ injunction mattersಅದು ಯಾವುದೇ ರೀತಿಯಲ್ಲಿಯೂ ಕೋರ್ಟ್ ಮೇಲೆ influence ಆಗುವಂತಹ ಪ್ರಶ್ನೆ ಇಲ್ಲ.

Mr. Speaker: Whether it is a suit for merely injunction or whether it is a suit for declaration of title, we have to verify it.
ಶ್ರೀ ಟಿ.ಬಿ. ಜಯಚಂದ್ರ: No, No.

Mr. Speaker: Whether it is a mere injunction suit or whether it is a declaration for the title, that, we have to see.

Sri T.B. Jayachandra: Yes.
ಅಧ್ಯಕ್ಷರು: Declaration of the title ಇದ್ದಾಗ ತಾವು ಏನು ಮಾಡುತ್ತೀರಿ?

Sri T.B. Jayachandra: Even assuming, if it is for a declaration of title, it is a civil matter. ವಿಧಾನಸಭೆಯಲ್ಲಿ ಆಗುವಂತಹ ಚರ್ಚೆಯ ಹಿನನೆಲೆಯಲ್ಲಿ ಪತ್ರಿಕೆಯಲ್ಲಿ ಬಂದ ವರದಿಯ ಆಧಾರದ ಮೇಲೆ ಅದು ಕೋರ್ಟಿನಲ್ಲಿ evidence ಆಗುವುದಿಲ್ಲ meanwhile ಯಾವುದೇ ದಾಖಲಾತಿಗಳು ಇರುತ್ತದೆಯೋ, ದಾಖಲಾತಿಗಳ ಆಧಾರದ ಮೇಲೆ ಅಲ್ಲಿ ಅವತ್ತು declaration ಆಗತಕ್ಕಂತಹದ್ದು injunction ಕೊಡುವಂತಹದ್ದು. ಇವತ್ತು ನಾವು ಇಲ್ಲಿ ಚರ್ಚೆ

ಮಾಡುವುದರಿಂದ ಅದರ ಮೇಲೆ ಯಾವ ರೀತಿಯಾಗಿ influence ಆಗುತ್ತದೆ. ಇಲ್ಲಿ ಪ್ರಶ್ನೆ ಉದ್ಭವಿಸಿರುವಂತಹದ್ದು ಅರಣ್ಯ ಪ್ರದೇಶದಲ್ಲಿ, ಅರಣ್ಯ ಪ್ರದೇಶವೆಂದು declare ಆಗಿದ್ದರೂ ಕೂಡ Forest Conservation Act ಗೆ violation ಮಾಡಿ ಇವತ್ತು ಭೂಮಂಜೂರಾತಿಯನ್ನು ಮಾಡುತ್ತಿದ್ದಾರೆ. 1930ರಿಂದಲೂ influence ಮಾಡುತ್ತಿದ್ದಾರೆ. It is a clear case of concocted documents. ಅದು ಕೋರ್ಟಿನಲ್ಲಿದೆ ಅದನ್ನು ಪೆಂಡಿಂಗ್ ಇಡುವಂತಹ ಕಾರಣಕ್ಕೋಸ್ಕರ ಇದನ್ನು ಮಾಡುತ್ತಿದ್ದೀರಿ.

(ಗೊಂದಲ)

Sri B.N. Bachchegowda: Don't mislead the House. I am sorry, ಮಾನ್ಯ ಅಧ್ಯಕ್ಷರೆ, he is misleading the House.

Sri T.B. Jayachandra: It is a clear case of concoted documents. ಅದು ಕೋರ್ಟಿನಲ್ಲಿದೆ ಅದನ್ನು ಇಡುವಂತಹ ಕಾರಣಕ್ಕೋಸ್ಕರ ಇದನ್ನು ಮಾಡುತ್ತಿದ್ದೀರಿ.

Sri B.N. Bachchegowda: He is misleading the House.

Sri B.N. Bachchegowda: He is a misleading the house.

Sri T.B. Jayachandra: It will not influence the Court. It is not sub-judice ಯಾವುದೇ ರೀತಿಯಲ್ಲಿಯೂ ಕೂಡ ಆಗುವುದಿಲ್ಲ. ನಿಯಮವನ್ನು ಮಾಡಬಹುದು, ಬಿಡಬಹುದು ಅನ್ನುವುದು ಅಧ್ಯಕ್ಷರಿಗೆ ಬಿಟ್ಟಿರುವಂತಹದ್ದು.

ಶ್ರೀ ಬಿ.ಎನ್. ಬಚ್ಚೇಗೌಡ: ಹಾಗಾದರೆ ನಿಯಮ ಬೇಡವೆಂದು ಹೇಳಿಬಿಡಿ.

ಶ್ರೀ ಟಿ.ಬಿ. ಜಯಚಂದ್ರ: ಆದರೆ ತಮ್ಮ argument ಸಮಂಜಸ ಅಲ್ಲ.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ: ನಿಯಮ ಬೇಕಾಗಿಲ್ಲವೆಂದು ಬಿಡಿ.

Sri T.B. Jayachandra: Declaration suit, injunction suit ವಿಧಾನಸಭೆಯಲ್ಲಿ ಚರ್ಚೆಯಾಗುವುದಕ್ಕೆ influence ಆಗುತ್ತದೆ ಅನ್ನುವುದಾದರೆ ಯಾಕೆ ಎಂದು ನನಗಂತೂ ಅರ್ಥ ಆಗುವುದಿಲ್ಲ.

ಶ್ರೀ ಆರ್. ಅಶೋಕ್ (ಮಾನ್ಯ ಸಾರಿಗೆ ಸಚಿವರು): ಇಲ್ಲಿ ಮಾತನಾಡ ಬಹುದು ಎನ್ನುವುದಾದರೆ ರೂಲ್ ಬುಕ್‌ನ್ನು ಏತಕ್ಕೆ ಓದುತ್ತಿದ್ದಾರೆ ಎನ್ನುವುದನ್ನು ಸಹ ನೋಡಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ನನಗಂತೂ ಅರ್ಥವಾಗುವುದಿಲ್ಲ. Declaration suitಗೂ ಇದಕ್ಕೂ ಸಂಬಂಧವಿಲ್ಲ. Declaration Suitನಲ್ಲಿ, documents to

title, properties, possession, these are all the important documents, not the discussion on the floor of the House or whether in what manner it comes in the news paper is not important. That is not evidence at all. Evidence Act ಪ್ರಕಾರ ಇದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ನಾನು ಕೆಲವೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ನಾನು ಹೇಳುತ್ತೇನೆ ನಂತರ ನೀವೇ ಮಾತನಾಡಿ. ನಾನು ಏನು ಹೇಳುತ್ತೇನೆ ಅದನ್ನು ಕೇಳಿ. ಅವರು ಏನು ಹೇಳಿದ್ದಾರೆ ಅದಕ್ಕೆ...

ಶ್ರೀ ಹೆಚ್.ಡಿ. ರೇವಣ್ಣ: ಅವರು ಏನು ಹೇಳಿದ್ದಾರೆ ಅದಕ್ಕೆ clarification ಮಾಡುತ್ತಿದ್ದೇನೆ.

ಅಧ್ಯಕ್ಷರು: ಅವರು ಏನು point of order ಎತ್ತಿದ್ದಾರೆ ಅದಕ್ಕೆ ತಾವು ಉತ್ತರವನ್ನು ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ: ಅದಕ್ಕೆ ನಾನು clarification ಕೊಡುತ್ತಿದ್ದೇನೆ.

ಅಧ್ಯಕ್ಷರು: ಅವರು ಎತ್ತಿರುವ point of orderಗೆ clarification ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಕಾರ್ಮಿಕ ಸಚಿವರು ಇದಕೋಸ್ಕರ ಇದು ಕೋರ್ಟಿನಲ್ಲಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. 1930ನೇ ಇಸವಿಯಿಂದ 316 ಎಕರೆ ಜಮೀನು ಅವರು ಹೇಳಿದ್ದು ಬೇಕಾದರೆ ಅದನ್ನು ಕಡತದಲ್ಲಿ ತೆಗಿಸಿ ನೋಡಿ. 1930ನೇ ಇಸವಿಯಿಂದ 316 ಎಕರೆ ಜಮೀನಿನ ಮಾರುತ್ತಿದ್ದಾರೆಂದು ಅವರು ಸದನಕ್ಕೆ ತಿಳಿಸಿದ್ದಾರೆ. ಈ 316 ಎಕರೆ ಜಮೀನು ಮಾಡಿ, ಇದು ಕೋರ್ಟಿನಲ್ಲಿದ್ದರೆ ನಾನು ಬೇಕಾದರೆ ತಾವು ಹೇಳಿದ್ದಕ್ಕೆ ಒಪ್ಪುತ್ತೇನೆ. ನಾನು ಅದರ ಮೇಲೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ರಾಜ್ಯದ ಜನತೆಗೆ ಈ ಬಗ್ಗೆ ಬೆಳಕನ್ನು ಚೆಲ್ಲುತ್ತಿರುವುದು ಈ ಬಗ್ಗೆ ನನ್ನ ಹತ್ತಿರ ದಾಖಲಾತಿ ಇದೆ. 2008ರಲ್ಲಿ ಕೇಸ್ ಹಾಕಿದ್ದಾರೆಂದು ಅವರು ಹೇಳಿದರು. 2008ರಲ್ಲಿ ಯಾರು ಕೇಸ್ ಹಾಕಿದ್ದಾರೆ? ಅದಕ್ಕೋಸ್ಕರವೇ ನಾನು ಹೇಳುತ್ತಿರುವುದು. 2008ರಲ್ಲಿ ನಾನು ಕೇಸ್ ಹಾಕಿದ್ದೀನಾ, ಈಗ Supreme Court guidelines ಪ್ರಕಾರ ಯಾರೂ ಫಾರೆಸ್ಟ್‌ನ ಒಂದು ಅಡಿ ಜಾಗವನ್ನು ಒತ್ತುವರಿ ಮಾಡಿದ್ದರೆ, ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ ನಾಳೆ ದಿವಸ ತಾವು Chief

Conservatorನ್ನು arrest ಮಾಡಬೇಕಾಗುತ್ತದೆ. ಏಕೆಂದರೆ ಅವರು F.I.R. ಹಾಕಿದ್ದಾರೆ. ಫಾರೆಸ್ಟ್ ಇಲಾಖೆಯವರೆ F.I.R. ಆಗಿ ಹಾಕಿರುವುದು. ಕಾನೂನು ರೀತಿಯಾಗಿ ಹೋದರೆ ನಿಮ್ಮ Forest Secretary ಯವರನ್ನು arrest ಮಾಡಬೇಕಾಗುತ್ತದೆ. Supreme Courtನ ಪ್ರಕಾರ ಈಗ ಚಿಕ್ಕಮಗಳೂರು ಜಿಲ್ಲೆಯಲ್ಲಿ ಡಿ.ಸಿ. ಯವರು ಹೊಟ್ಟೆಗೆ ಹಿಟ್ಟಿಲ್ಲದವರನ್ನು ಒಕ್ಕಲೆಬ್ಬಿಸಿದ್ದೀರಿ. Supreme Court direction ಪ್ರಕಾರ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಎಕರೆ ಜಾಗವನ್ನು ಯಾರಿಗಾದರೂ ಬಿಟ್ಟಿದ್ದೀರಾ ಏಕೆ ಎಂದರೆ ಕಾರ್ಮಿಕ ಸಚಿವರು ಅವರ ಕಡೆಯವರು ಇದ್ದಾರೆಂದು ಹೇಳಿ ಅವರು ಛಾಪಾ ಪುಸ್ತಕವನ್ನು ತೆಗೆದುಕೊಂಡು ಓದುತ್ತಿದ್ದಾರೆ.

ಅವರಿಗೆ ಏನಾಗಿದೆಯೆಂದರೆ, ಈ ರಾಜ್ಯದ ಅರಣ್ಯ ಉಳಿಯಬೇಕಾಗಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ: ನಮ್ಮ ಕಡೆಯವರು ಯಾರೂ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ನಿಮ್ಮ ಕಡೆ ಯಾರು ಇಲ್ಲದಿದ್ದರೆ ಸುಮ್ಮನಿರಿ. ಮಧ್ಯದಲ್ಲಿ ನೀವ್ಯಾಕೆ ಮಾತನಾಡಲಿಕ್ಕೆ ಬರುತ್ತೀರಿ? ಶ್ರೀ ಸಿ.ಎನ್. ಬೈರೇಗೌಡರು ಎನ್ನುವವರು ಯಾರು ಸ್ವಾಮಿ...?

(**ಗೊಂದಲ**)

ಶ್ರೀ ಬಿ.ಎನ್. ಬಚ್ಚೇಗೌಡ: ನಿಮಗೇನು ಗೊತ್ತಿದೆ? ಅರಣ್ಯದ ಬಗ್ಗೆ ನಮಗೇನು ಗೊತ್ತಿದೆ, ಅದು ಗೊತ್ತಿದೆ, ಇದು ಗೊತ್ತಿದೆ ಎನ್ನುತ್ತೀರಿ, ಅರಣ್ಯದ ಬಗ್ಗೆ ನನಗೆ ಗೊತ್ತಿದೆ, ಈಚೆಗೆ ತೆಗೆಯುತ್ತೇನೆ. ಪುರಂಗಿ ಊದಿ ಹಾವನ್ನು ತೆಗೆಯುವುದನ್ನು ನಾನು ನೋಡಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: ನನಗೆ ಗೊತ್ತಿರುವುದಕ್ಕೆ ಹೇಳುತ್ತಿರುವುದು ಹೇಳಿ. ನಾನೇನಾದರೂ ನಿಮ್ಮನ್ನು ತೆಗೆಯುವುದನ್ನು ಬೇಡವೆಂದು ಹಿಡಿದು ಕೊಂಡಿದೇನೆಯೇ? ಮೊನ್ನೆ ನಾಲ್ಕು ಜನ ಹೇಳಿಕೆ ಕೊಟ್ಟರು, ದೇವನಹಳ್ಳಿಯಲ್ಲಿ ಯಾರ್ಯಾರು ಮಾಡಿದ್ದಾರೆ, ಚಂದ್ರಣ್ಣ, ನಾರಾಯಣ ಸ್ವಾಮಿ ಅವರನ್ನು ಒಳಗೆ ಹಾಕಿ. ಯಾರು ನಾರಾಯಣ ಸ್ವಾಮಿ ಬಿನ್ ಪಾರ್ವತಮ್ಮ, ನಾರಾಯಣಸ್ವಾಮಿ, ಅವರ ಹೆಂಡತಿ ಪಾರ್ವತಮ್ಮರವರ ಹೆಸರಿಗೆ sanction ಆದರೆ ನಾರಾಯಣ ಸ್ವಾಮಿ ಎನ್ನುವವರು ಒತ್ತುವರಿ ಮಾಡಿಕೊಂಡಿದ್ದಾರೆ. ಇದು ಬರುತ್ತದೆ ಅಂದ ತಕ್ಷಣ ಪತ್ರಿಕೆಯಲ್ಲಿ ನಾಲ್ಕು ಜನರ ಹತ್ತಿರ ಹೇಳಿಸುತ್ತೀರಿ. ನಾವೇನು ಬೇಡವೆನ್ನುವುದಿಲ್ಲ. ಹೇಳಿಸಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಪತ್ರಿಕೆಯವರಿಗೆ ನಾವ್ಯಾಕೆ ಹೇಳಿಸೋಣ. ಅವರಿಗೇನು ಸ್ವತಂತ್ರವಿಲ್ಲವೇ? ಅಲ್ಲ, ಪತ್ರಿಕೆಯವರಿಗೆ ಸ್ವತಂತ್ರವಿದೆ.

ಶ್ರೀ ಹೆಚ್.ಡಿ. ರೇವಣ್ಣ: ನೀವು ನೀರಾವರಿ ಸಚಿವರು, ಕಂದಾಯ ಸಚಿವರಲ್ಲ, ಸುಮ್ಮನಿರಿ.

(ಗೊಂದಲ)

ಶ್ರೀ ಸಿ.ಟಿ. ರವಿ: ಅಧ್ಯಕ್ಷರೇ, ಯಾವ ನಾರಾಯಣಸ್ವಾಮಿ, ಯಾರ ಹೆಸರಿನಲ್ಲಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಗೊತ್ತಾಗುವುದು ತನಿಖೆ ನಡೆಸಿದಾಗ. ಅಲ್ಲಿ ಅಕ್ರಮ ನಡೆದಿದೆ, ಅದಕ್ಕೆ ಆ ಬಗ್ಗೆ ತನಿಖೆ ನಡೆಸಲಿ ಎಂದು ನಾವು ಸರ್ಕಾರಕ್ಕೆ ಒತ್ತಾಯ ಮಾಡುತ್ತಿರುವುದು. ಯಾವ ನಾರಾಯಣಸ್ವಾಮಿ, ಯಾರ ಹೆಸರಿನಲ್ಲಿ ಒತ್ತುವರಿಯಾಗಿದೆ, ಯಾರ ಹೆಂಡತಿ, ಯಾರು owner ಅವೆಲ್ಲಾ ಅಮೇಲೆ ಗೊತ್ತಾಗುತ್ತದೆ. ಯಾರ ಕೂಸು ಯಾರ ಮಡಿಲಿಗೆ ಬಿಟ್ಟದ್ದಾರೆ ಅಮೇಲೆ ಗೊತ್ತಾಗುತ್ತದೆ ಯಾರು ಇದಕ್ಕೆಲ್ಲಾ ಬೆಂಬಲ ಕೊಟ್ಟರು ಈ ಎಲ್ಲಾ ಸತ್ಯ ತನಿಖೆ ನಡೆಸಿದರೆ ಗೊತ್ತಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಇಷ್ಟು ಹೊತ್ತು ಚರ್ಚೆ ಮಾಡಿ ಇದನ್ನು ಮುಂದುವರೆಸಿಕೊಂಡು ಹೋದರೆ ಇದರಲ್ಲಿ ಅರ್ಥ ಇಲ್ಲ, ಈ ಮನೆಯಲ್ಲಿ ನಮಗೆ ಒಂದು ಅಧಿಕಾರ ಇದೆ. ಅದು Freedom of speech. ಈ speechಗೆ ಧಕ್ಕೆ ಬರುವಂಥ ರೀತಿಯಲ್ಲಿ ಇವತ್ತು ಚರ್ಚೆಯಾಗುತ್ತಿದೆ. There is a recent ruling "while applying the restrictions regarding the rule of sub-judice, care has to be taken to see that the primary right of the freedom of speech is not unduly impaired to the prejudice of the legislature. In this context the Speaker rules. The rules whether a motion which relates to a matter which is under adjudication by Court of law should be admitted or discussed in the House has to be interpreted strictly. While on the one hand the chair has to ensure that no discussion in this house should prejudice the course of justice. The chair has to see that the house is not debarred from discussing a urgent matter of public importance on the ground that a similar allied linked matter is before the Court of Law."

ಶ್ರೀ ಬಿ.ಎನ್. ಬಚ್ಚೇಗೌಡ: What is the urgency?

ಶ್ರೀ ಟಿ.ಬಿ. ಜಯಚಂದ್ರ: Yes, Importance is, it is the gross violation of the Forest Conservation Act itself. It is not a State Govrnment Act. It is a Government of India Act. Conservation Actಗೆ ಧಕ್ಕೆ ಬರುತ್ತಿದೆ.

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು): ವಿಚಾರ ಪ್ರಸ್ತಾಪ ಮಾಡಿ.

ಶ್ರೀ ಬಿ.ಎನ್. ಬಚ್ಚೇಗೌಡ: This is not a recent occurrence.

ಶ್ರೀ ಟಿ.ಬಿ. ಜಯಚಂದ್ರ: Conservation Actಗೆ ಧಕ್ಕೆ ಬರುತ್ತಿದೆ ಎಂಬ ವಿಚಾರ ಪ್ರಸ್ತಾಪ ಆಗಿರಬೇಕಾದಾಗ Is it not a matter of public importance? Forest Conservation Act violation ಆಗಿ ಅದಕ್ಕೆ against ಆಗಿ ಇಲ್ಲಿ land ಮಂಜೂರಾಗುತ್ತಿದೆ ಎಂದರೆ is it not a matter of Public importance?

ಶ್ರೀ ಬಿ.ಎನ್. ಬಚ್ಚೇಗೌಡ: Why do y ou say violation ಆಗಿದೆ ಎಂದು?

ಶ್ರೀ ಜಿ. ಕರುಣಾಕರ ರೆಡ್ಡಿ: ಅಧ್ಯಕ್ಷರು ರೂಲಿಂಗ್ ಕೊಡಲಿ, ನಾವು ಸರ್ಕಾರದವರು ಉತ್ತರ ಕೊಡಲಿಕ್ಕೆ ಸಿದ್ಧರಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ: ಅಧ್ಯಕ್ಷರೇ, ಕಂದಾಯ ಸಚಿವರು ಉತ್ತರ ಕೊಡಲಿಕ್ಕೆ ತಯಾರಾಗಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: ಈಗ ಪರೋಕ್ಷವಾಗಿ ಕಂದಾಯ ಸಚಿವರು ಒಪ್ಪಿಕೊಂಡಿದ್ದಾರೆ.

ಶ್ರೀ ಎಂ.ಟಿ. ಕೃಷ್ಣಪ್ಪ: ಅಧ್ಯಕ್ಷರೇ, ಒಂದು ಪಾಯಿಂಟ್ ಅನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. 1965ರಲ್ಲಿ 316 ಎಕರೆ ಭೂಮಿಯನ್ನು Forest Department Revenue ಇಲಾಖೆಗೆ handover ಮಾಡಿತು. ಹಾಗಾದರೆ 1930 ಇಸವಿಯಲ್ಲಿ.

ಶ್ರೀ ಜಿ. ಕರುಣಾಕರ ರೆಡ್ಡಿ: ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಡಲಿ, ಆಮೇಲೆ Forest Conservation Act Revenue, Forest, ಯಾರ್ಯಾರಿಗೆ ಬರುತ್ತದೆ ಎಂಬುದರ ಬಗ್ಗೆ ಆಮೇಲೆ ಚರ್ಚೆ ಮಾಡೋಣ. ಮೊದಲು ಅಧ್ಯಕ್ಷರು ರೂಲಿಂಗ್ ಕೊಡಲಿ.

ಶ್ರೀ ಬಿ.ಎನ್. ಬಚ್ಚೇಗೌಡ: ಅಧ್ಯಕ್ಷರು ರೂಲಿಂಗ್ ಕೊಡಲಿ.

ಶ್ರೀ ಟಿ.ಬಿ. ಜಯಚಂದ್ರ: ರೂಲಿಂಗ್‌ಗೆ ನಾವು ಹೇಳುತ್ತಿರುವುದು, matter of public importance ಏನೆಂದರೆ.

ಶ್ರೀ ಬಿ.ಎನ್. ಬಚ್ಚೇಗೌಡ: My Point of Order ಅಧ್ಯಕ್ಷರು ರೂಲಿಂಗ್ ಕೊಡಲಿ. Let there be a ruling in this House. ಮಾತನಾಡಲಿ ಎಂದರೆ ಆಗಬಹುದು.

ಶ್ರೀ ಟಿ.ಬಿ. ಜಯಚಂದ್ರ: A matter of public importance ಅಂದರೆ the allegation here is the violation of Conservation Act itself. Suppose ಇಂಥ ವಿಚಾರ ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ ಎಂದರೆ ನಾವು ಏಕೆ ಸದಸ್ಯರಾಗಿ ಕುಳಿತುಕೊಳ್ಳಬೇಕು. ಹಾಗಾದರೆ ಇವತ್ತು ಅರಣ್ಯವನ್ನು ಯಾವ ರೀತಿ ರಕ್ಷಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ? ದಯವಿಟ್ಟು ಇದಕ್ಕೆ ತೀರ್ಪನ್ನು ಕೊಡಿ, ಹಿಂದೆ ಈ ರೀತಿ ಆಗಿರುವಂಥ ಹತ್ತಾರು ನಿದರ್ಶನಗಳು ಇವೆ. Conservation Act violation ಆಗುತ್ತಿರುವಂಥ ಹಿನ್ನೆಲೆಯಲ್ಲಿ ಈ ವಿಚಾರ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ, ಈ ವಿಚಾರ ಸದನದಲ್ಲಿ ಚರ್ಚೆ ಆಗಬೇಕು ಇದಕ್ಕೆ ಮಹತ್ವ ಸಿಗಬೇಕು ಎಂಬ ದೃಷ್ಟಿಯಿಂದ ನಾನು ವಾದ ಮಾಡುತ್ತದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ರೇವಣ್ಣನವರು, ಜಯಚಂದ್ರರವರು ಹೇಳಿದ ಹಾಗೆ ಹೊಸ ರೂಲಿಂಗ್ ಕೊಡಿ, ಚರ್ಚೆಯಾಗಲಿ, ನಾವು ಅದಕ್ಕೆ ಸಿದ್ಧರಿದ್ದೇವೆ. ಈ ಹೌಸ್‌ಗೆ ನೀವೇ ಒಂದು ರೂಲಿಂಗ್ ಕೊಟ್ಟು ಬಿಡಿ. ಇನ್ನು ಮೇಲೆ ನಾವು ಹಾಗೆ ನಡೆದುಕೊಳ್ಳುತ್ತೇವೆ. Section 327ನಲ್ಲಿ ಏನಿದೆ ಎಂದು ನಮ್ಮ ನಮ್ಮ ಲಾ ಮಿನಿಸ್ಟರ್ ಹೇಳಿದಂತೆ it is quite clear. ನಿಯಮಾನುಸಾರ ನೀವು ಹೇಳಿಬಿಡಿ, ನಿಮ್ಮ ರೂಲಿಂಗ್ ಪ್ರಕಾರ ಹೋಗೋಣ. ಚರ್ಚೆಗೆ I do not come in your way. I have an open mind in this politics. Let there be a ruling.

ಶ್ರೀ ಟಿ.ಬಿ. ಜಯಚಂದ್ರ: Recent ruling is there. ಸಭೆಯಲ್ಲಿ ಚರ್ಚೆ ಆಗಬೇಕಾಗಿರುವ ವಿಚಾರ ಕೋರ್ಟಿನಲ್ಲಿ ಯಾವ ರೀತಿ influence ಆಗುತ್ತದೆ? ನೀವು declaration suit title ಮೇಲೆ ಆಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ: ತಾವೇ ಇಲ್ಲಿದ್ದಾಗ ಏನು ಮಾಡುತ್ತಿದ್ದಿರಿ? ಇಲ್ಲಿದ್ದಾಗ ಒಂದು ರೀತಿ ಮಾತನಾಡುತ್ತೀರಿ? ಅಲ್ಲಿದ್ದಾಗ ಒಂದು ರೀತಿ ಮಾತನಾಡುತ್ತೀರಿ?

ಶ್ರೀ ಟಿ.ಬಿ. ಜಯಚಂದ್ರ: ನಾನು ಅಲ್ಲಿದ್ದರೂ ಒಂದೇ ಮಾತು, ಇಲ್ಲಿದ್ದರೂ ಒಂದೇ ಮಾತು. Declaration suitಗೆ title ಮೇಲೆ judgment ಕೊಡುತ್ತಾರೋ? ಅಸೆಂಬ್ಲಿಯಲ್ಲಿ ಚರ್ಚೆಯಾಗಿರುವುದಕ್ಕೆ judgment ಕೊಡುತ್ತಾರೋ? ಇದೇನು ಹೊಸದಲ್ಲ, ಹಳೆಯದಾಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ: ಅಧ್ಯಕ್ಷರು ರೂಲಿಂಗ್ ಕೊಡಲಿ ಅದರ ಪ್ರಕಾರ ಹೋಗೋಣ. ಇದು ನನ್ನ Point of Order.

ಶ್ರೀ ಕೆ.ಎಂ. ಶಿವಲಿಂಗೇಗೌಡ: Point of Order ಅವರು ಎತ್ತಿದಾಗ ಅವರಿಗೊಂದು rules ಪುಸ್ತಕ ಓದುವುದು, ನನಗೆ ಒಂದು ಪುಸ್ತಕ ಓದುವುದಲ್ಲ, ಪುಸ್ತಕ ಎಲ್ಲರಿಗೂ ಒಂದೇ. ನಿಯಮಾವಳಿಗಳು ಅಂದರೆ ಎಲ್ಲರಿಗೂ ಒಂದೇ. ನನ್ನದನ್ನು ತಿರಸ್ಕಾರ ಮಾಡಿದ್ದೀರಿ, ಏನು "ಅನುದಾನದ ಬೇಡಿಕೆಗಳನ್ನು ಮತಕ್ಕೆ ಹಾಕುವುದು. ವಿಧಾನ ಸಭಾಧ್ಯಕ್ಷರು ಸದನದ ನಾಯಕರೊಂದಿಗೆ ಸಮಾಲೋಚಿಸಿ ಅನುದಾನಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಚರ್ಚಿಸಲು ಮತ್ತು ಮತಕ್ಕೆ ಹಾಕಲು 15 ದಿವಸಗಳಿಗೆ ಕಡಿಮೆ ಇಲ್ಲದಂತೆ ಚರ್ಚಿಸಲು ಕಾಲಾವಕಾಶವನ್ನು ನಿಗದಿ ಮಾಡಬೇಕು "ಎಂದು ಇದೆ. ಇನ್ನೂ ಹೆಚ್ಚಿಗೆ ಬೇಕಾದರೂ ಮಾಡಬಹುದು ಎಂದು ಇದೆ ಆದರೆ ಇವರು ಮಂಡಿಸಿದ್ದು ಯಾವತ್ತು? ಐದು ಬೇಡಿಕೆಗಳನ್ನು ಅವತ್ತು ಮಂಡಿಸಿರಬಹುದು, ಆದರೆ ಮೊನ್ನೆ ದಿವಸ ಬೇಡಿಕೆಗಳ ಮೇಲೆ ಚರ್ಚೆ ಮಂಡಿಸಿ ದಿನಾಂಕ 29-7-2009ಕ್ಕೆ ಸದನವನ್ನು ಮುಂದೂಡುತ್ತೇವೆಂದರೆ ಇದು Point of Order ಆಗುವುದಿಲ್ಲವೆ? Point of Orderಗೆ ಇವರಿಗೊಂದು ರೂಲ್ಸ್. ಕಾನೂನು ಸಚಿವರು point of orderಗೆ ರೂಲ್ಸ್ ಇದನ್ನೇ ಹೇಳುತ್ತಿದ್ದಾರೆ. ಇದೇನು ಹೇಳುತ್ತದೆ? ನಾವು ಇದನ್ನೆಲ್ಲಾ ಸಹಿಸಿಕೊಂಡು ಸುಮ್ಮನಿರುವುದಿಲ್ಲವೇ? ಏನೋ ಸದನ ನಡೆಯಲಿ, ಸಂಪ್ರದಾಯವನ್ನು ಮುರಿಯುವುದು ಬೇಡ ಎಂದು ನಾವು ಸುಮ್ಮನಿದ್ದೇವೆ. ಕಾನೂನಿನ ಪುಸ್ತಕದಲ್ಲಿರುವ ನಿಯಮಾವಳಿಯನ್ನು ಹಿಡಿದುಕೊಂಡು ಹೋದರೆ ಬಹಳ ಗಂಟೆಗಳ ಕಾಲ ಸದನ ನಡೆಯುವುದಿಲ್ಲ. ಆದರೆ ನಾವೂ ಸಹ ಇವತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಇವತ್ತೇನೆ ಬೆಂಗಳೂರಿನ ಸುತ್ತಮುತ್ತ ಬಹಳಷ್ಟು ಭೂಮಿಯನ್ನು ಪಟ್ಟಭದ್ರಹಿತಾಸಕ್ತಿಗಳು ಲೂಟಿ ಮಾಡುತ್ತಿದ್ದಾರೆ. ಈ ದೇಶದಲ್ಲಿ ಪರಿಸರವನ್ನು ಹಾಳು ಮಾಡುತ್ತಿದ್ದಾರೆ, ಅದರಲ್ಲಿಯೂ ಅರಣ್ಯ ಭೂಮಿಯನ್ನು ಲೂಟಿ ಮಾಡುತ್ತಿದ್ದಾರೆ, ಕೃಷಿ ಭೂಮಿಯೋ, ಮತ್ತೊಂದು ಈ N.R.I ಯವರು ಮಾಡುವಂಥ ಭೂಮಿಯಾದರೆ ಅದೊಂದು ತರಹ. ಇವತ್ತು ಈ ದೇಶದಲ್ಲಿ

ಅರಣ್ಯ ಉಳಿಯಬೇಕು. ಈ ದೇಶದ ಪರಿಸರ ಹಾಳಾಗಿದೆ, ಬೆಂಗಳೂರಿನ ಅರಿವಿನಿಲ್ಲಿರತಕ್ಕಂಥ ಭೂಮಿಯನ್ನು ಕೆಲವು ಲಪಟಾಯಿಸುತ್ತಿದ್ದಾರೆ, ಇದನ್ನು ಕಾನೂನಿನ ಚೌಕಟ್ಟನ್ನು, ಎಲ್ಲೆಯನ್ನು ಮೀರಿ ಪಟ್ಟಭದ್ರಹಿತಾಸಕ್ತಿಗಳು ನುಂಗುತ್ತಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಬೆಂಗಳೂರಿನಂಥ ಒಂದು ಮಹಾನಗರ ಇವತ್ತು ಹೊರಹೊಮ್ಮಬೇಕಾದರೆ ಏನು ಬೆಂಗಳೂರಿನ ಅರಿವಿನಲ್ಲಿರುವಂಥ ಎಲ್ಲಾ ಗ್ರಾಮೀಣ ಪ್ರದೇಶದ ಭೂಮಿ, ಯಾವ್ಯಾವುದು ಸರ್ಕಾರಿ ಭೂಮಿ ಇದೆ, ಅದು ಈ ಬೆಂಗಳೂರು ನಗರ ಅಭಿವೃದ್ಧಿಯನ್ನು ಹೊಂದಿ ಮುಂದೆ ಈ ದೇಶದಲ್ಲಿ, ಈ ಪ್ರಪಂಚದಲ್ಲಿ ದೊಡ್ಡ ನಗರವಾಗಿ ಬೆಳೆಯಬೇಕಾದರೆ ಈ ಭೂಮಿಯ ಅವಶ್ಯತೆ ಇದೆ. ಈ ಭೂಮಿಯನ್ನು ಹಾಳು ಮಾಡಬಾರದು, ಪರಿಸರವನ್ನು ಹಾಳು ಮಾಡಬಾರದು ಎನ್ನುವಂಥ ದೃಷ್ಟಿಯಿಂದ ತಾವೊಂದು ರೂಲಿಂಗ್ ಅನ್ನು ತರದೆ ಅದಕ್ಕೆ order ಎಂದು ಕುಳಿತುಕೊಂಡರೆ ಇದೇನು ಹೇಳುತ್ತದೆ?

ಅಧ್ಯಕ್ಷರು: ರೇವಣ್ಣನವರೇ ನಾನು ರೂಲಿಂಗ್ ಕೊಡುತ್ತೇನೆ. ಈಗ ಮಾನ್ಯ ರೇವಣ್ಣನವರು ಏನು ಇವತ್ತು ಪ್ರಸ್ತಾಪ ಮಾಡಿದರು ಮತ್ತು ಯಾವ ವಿಷಯದ ಹಿನ್ನೆಲೆ ಎನ್ನುವಂಥಾದ್ದು, forest land ಬಗ್ಗೆ ಹೇಳುತ್ತಿದ್ದಾರೆ. ಅದಕ್ಕೆ ಮಾನ್ಯ ಬಚ್ಚೇಗೌಡರು point of order raise ಮಾಡಿ, ಕೋರ್ಟ್‌ನಲ್ಲಿ ಕೇಸ್ ಇದೆ ಎನ್ನುವುದನ್ನು ಹೇಳಿದರು. ಅರಣ್ಯ ಇಲಾಖೆಯವರು, Karnataka Forest Development Corporation ಅವರೂ ಒಂದು ಕೇಸ್ ಫೈಲ್ ಮಾಡಿದ್ದಾರೆ. O.S.No. 332/2008ನಲ್ಲಿ Forest Departmentನವರು Rathnamma w/o Somanna and somany others ಅವರ ಮೇಲೆ ಕೇಸ್ ಫೈಲ್ ಮಾಡಿದ್ದಾರೆ. ಕೇಸ್ ಪೆಂಡಿಂಗ್ ಇದೆ. ಮಾನ್ಯ ಜಯಚಂದ್ರರವರು ಕೆಲವು ರೂಲಿಂಗ್ಸ್ ಅನ್ನು ಕೊಟ್ಟಿದ್ದಾರೆ. ಒಂದು ನಾನು ಹೇಳುವುದು ಈಗ ಇದು ಗೋಮಾಳ ಜಮೀನು ಎನ್ನುವಂಥಾದ್ದು, ಇದು forest departmentಗೆ ಸೇರುವಂಥಾದ್ದು, ಇವು ಎಲ್ಲಾ issues ಇದರಲ್ಲಿ ಇವೆ ಮತ್ತು ಕೋರ್ಟ್‌ನಲ್ಲಿ ಕೆಲವೊಂದು issues ಇವೆ. ಇವತ್ತು ಬಹುಶಃ ಮಾನ್ಯ ರೇವಣ್ಣನವರು ಏನು raise ಮಾಡುತ್ತಿದ್ದೀರಿ, ಅದು ಕೋರ್ಟ್‌ನಲ್ಲಿ ಇರುವಂಥ ವಿಷಯ ಯಾವುದು ಇದೆ ಎಂಬುದು ತಮಗೂ ಗೊತ್ತಿದೆ. ಬಚ್ಚೇಗೌಡರಿಗೂ ಆ ವಿಷಯ ಗೊತ್ತಿದೆ. Details ಇನ್ನೂ ನನ್ನ ಕಡೆ ಬಂದಿಲ್ಲ. ಈಗ ಏನು ಒಂದು interim order ಕೊಟ್ಟಿದ್ದಾರೆ, ಅದರ ಮೇಲೆ ನಾನು ತಿಳಿದುಕೊಂಡಿದ್ದೇನೆ. Forest department

ನವರು ಈ ಕೇಸ್ ಫೈಲ್ ಮಾಡಿದ್ದಾರೆ. ಅದರಲ್ಲಿ interim order ಏನು ಮಾಡಿದ್ದಾರೆ ಎಂದರೆ, ಅಲ್ಲಿ ಯಾವುದೇ ಒಂದು position ಗೆ intervention ಆಗಬಾರದು ಎನ್ನುವಂಥ defendants ಮೇಲೆ ಒಂದು order issue ಆಗಿದೆ. ಇವೆಲ್ಲಾ ಕೋರ್ಟ್‌ನಲ್ಲಿ ಇರುವಂಥ matter ಹೀಗಾಗಿ ಇಲ್ಲಿ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಅಲ್ಲಿ ಕೋರ್ಟ್‌ನಲ್ಲಿರತಕ್ಕಂಥ ವ್ಯಕ್ತಿಗಳು ಯಾರು ಇದ್ದಾರೆ,...

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ಹೇಳುತ್ತೇನೆ, ಸುಮ್ಮನಿರಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ತಾವು ಹೇಳುವುದಕ್ಕೆ ಮುಂಚೆ ಒಂದೇ ಒಂದು ಮಾತು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಅಲ್ಲಿ ಏನು ಒಂದು dispute ಇದೆ, point ಏನಿದೆ ಅದಕ್ಕೆ ಯಾವುದೇ ರೀತಿಯ prejudice ಆಗದೇ ಇರುವ ರೀತಿಯಲ್ಲಿ ಚರ್ಚೆ ಮಾಡಬಹುದು ಎನ್ನುವ ಸಾಕಷ್ಟು ರೂಲಿಂಗ್ಸ ಇವೆ. ಅಲ್ಲಿ ಕೋರ್ಟ್‌ನಲ್ಲಿರತಕ್ಕಂಥ matterಗೆ ಯಾವುದೇ ರೀತಿಯ affect ಆಗದ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. In brief ಚರ್ಚೆ ಮಾಡಬೇಕು. Judicialಗೆ ಯಾವುದೇ ರೀತಿಯಲ್ಲಿ affect ಆಗಬಾರದು, ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಚರ್ಚೆ ಮಾಡಬೇಕು. ಆದರೆ, ಇದನ್ನು ಸೋಮವಾರ ಚರ್ಚೆ ಮಾಡಿದರೆ ಚಲೋ ಇರುತ್ತದೆ. ಏಕೆಂದರೆ, ಇವತ್ತು ಬಜೆಟ್ ಮೇಲೆ ಚರ್ಚೆ start ಮಾಡೋಣ.

ಅಧ್ಯಕ್ಷರು: ಎರಡು ಗಂಟೆಯೊಳಗೆ ಮುಗಿಸಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಎರಡು ಗಂಟೆಯೊಳಗೆ ಆಗುವುದಿಲ್ಲ.

ಅಧ್ಯಕ್ಷರು: ಈ ವಿಷಯದ ಮೇಲಿನ ಚರ್ಚೆಯನ್ನು ಸೋಮವಾರ ಇಟ್ಟುಕೊಳ್ಳೋಣ. ರೇವಣ್ಣನವರೇ ಸೋಮವಾರ ಇಟ್ಟುಕೊಳ್ಳೋಣ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಸೋಮವಾರು ಇನ್ನೂ ಹಲವಾರು ವಿಷಯಗಳಿವೆ. ಕಡತ ಸಿದ್ದವಾಗಿವೆ. ನಾವು ready ಯಾಗಿದ್ದೇವೆ. ಚರ್ಚೆ ಮಾಡೋಣ.

(ಗೊಂದಲ)

ಅಧ್ಯಕ್ಷರು: ಎರಡು ಗಂಟೆಯೊಳಗೆ ಮುಗಿಸಬೇಕು. ಎಲ್ಲರೂ ಮಾತನಾಡ ಬೇಕಾಗಿಲ್ಲ. ನಿಮ್ಮ ಶಾಸಕರು ಎಲ್ಲರೂ ಮಾತನಾಡುವುದು ಬೇಕಾಗಿಲ್ಲ. ಅದೊಂದು restruction ಅನ್ನು ನೀವು ಹಾಕಿಕೊಳ್ಳಿ. ಲಿಮಿಟ್ ಇರುವುದು ಒಬ್ಬರಿಗೆ. ಒಬ್ಬರು ಮಾತನಾಡಿ.

(ಗೊಂದಲ)

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಇವತ್ತು ಗಳಿಗೆ ಒಳ್ಳೆಯದು ಇದೆ ಎಂದು ನೋಡಿ ಕೇಳಿಕೊಂಡು ಬಂದಿದ್ದಾರೆ. ಸೋಮವಾರ ಎಂದರೆ ಮತ್ತೆ ಗಳಿಗೆ ಬದಲಾಗಿ ಬಿಡುತ್ತದೆ.

(ಗೊಂದಲ)

ಅಧ್ಯಕ್ಷರು: ನೀವು ಒಬ್ಬರೇ ಮಾತನಾಡಿ. ಈಗ ಉಳದವರೆಲ್ಲಾ ಮಾತನಾಡುವುದು ಬೇಡ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಆಯಿತು ಸ್ವಾಮಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ದಯಮಾಡಿ ಅಧ್ಯಕ್ಷರೆ, ನಾವು ಮಾತನಾಡಬೇಕು.

(ಗೊಂದಲ)

ಅಧ್ಯಕ್ಷರು: ಎಲ್ಲರಿಗೂ ಮಾತನಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ನಿಮ್ಮ ನಾಯಕರು ಮಾತನಾಡಿದರೆ ಆಗುವುದಿಲ್ಲವೇ?

(ಗೊಂದಲ)

ಕೆ.ಎಂ. ಶಿವಲಿಂಗೇಗೌಡ: ನಮ್ಮ ನಾಯಕರು ಮಾತನಾಡಲಿ. ನಾಯಕರ ಜೊತೆಗೆ ನಾವು ಮಾತನಾಡುತ್ತೇವೆ ಅಷ್ಟೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ಒಂದು ವಿಷಯ ತರಬೇಕಾದರೆ, ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಹೋಬಳಿ ತೆನೆಯೂರು ಗ್ರಾಮಕ್ಕೆ ಸೇರಿದ 316 ಎಕರೆ 19 ಗುಂಟೆ ಜಮೀನು, ಆ ಜಮೀನಿನಲ್ಲಿ 250 ಎಕರೆ ಪ್ರದೇಶವನ್ನು 1965ನೇ ಇಸವಿಯಲ್ಲಿ ಕೊಟ್ಟಿರುವ ದಾಖಲಾತಿಯನ್ನು ನಿಮ್ಮ ಗಮನಕ್ಕೆ ಆಮೇಲೆ ಕಳುಹಿಸಿ ಕೊಡುತ್ತೇನೆ ಸ್ವಾಮಿ. ಈ 316 ಎಕರೆ 19 ಗುಂಟೆ ಜಮೀನಿನಲ್ಲಿ 250 ಎಕರೆ ಜಮೀನನ್ನು forest

ಇಲಾಖೆಗೆ handover ಮಾಡಿರುವಂಥ ಒಂದು ಕಡತವನ್ನು ಮೊದಲನೆಯದಾಗಿ ನಿಮಗೆ ಕಳುಹಿಸಿ ಕೊಡುತ್ತೇನೆ. ಏಕೆಂದರೆ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 1965ನೇ ಇಸವಿಯಲ್ಲಿ ಕೊಟ್ಟಂಥ ಜಮೀನಿನಲ್ಲಿ 150 ಎಕರೆ RTC ಎಲ್ಲಾ ಪ್ರತಿಯೊಂದು ಮಾಡಿದ್ದಾರೆ. ಮತ್ತೆ ಬಾಕಿ ಇರುವ 100 ಎಕರೆ ಜಮೀನಿಗೆ RTC ಕೊಡಿ ಎಂದು ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಯಲ್ಲಿ ಇವತ್ತು ಜಿಜ್ಞಾಸೆ ನಡೆಯುತ್ತಿದೆ. ತಮ್ಮ ಗಮನಕ್ಕೆ ತರುವುದೇನೆಂದರೆ, ಏನು ಸರ್ವೆ ನಂಬರ್ 17, 316 ಎಕರೆ 19 ಗುಂಟೆ ಇದೆ, ಅದು ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 2 ಎಲ್‌ಡಿ 62, 1–8–1964 ಮತ್ತೆ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 32 ಎಲ್‌ಡಿ ... (ಗೊಂದಲ). ಸ್ವಾಮಿ ದಯಮಾಡಿ ಸದಸ್ಯರು ಒಂದು ಎರಡು ನಿಮಿಷ ತಾಳ್ಮೆಯಿಂದ ಇರುವುದಕ್ಕೆ ಹೇಳಿ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರ ಪೀಠವನ್ನು ಮಾನ್ಯ ಯೋಗೇಶ್ ಭಟ್‌ರವರು ಅಲಂಕರಿಸಿದರು).

ಶ್ರೀ ಹೆಚ್.ಡಿ. ರೇವಣ್ಣ: ಈಗ ದಿನಾಂಕ 26–7–1965ರ ಪ್ರಕಾರ 316 ಎಕರೆ ಗೋಮಾಳದಲ್ಲಿ 250 ಎಕರೆ ಅರಣ್ಯ ಇಲಾಖೆಗೆ ವರ್ಗಾಯಿಸಿರುವುದನ್ನು ತಮ್ಮ ಗಮನಕ್ಕೆ ದಾಖಲಾತಿ ಕೊಡುತ್ತೇನೆ ಎಂದು ಹೇಳಿದ್ದೇನೆ. ಸರ್ಕಾರಿ ಆದೇಶ ನಂಬರ್ ಕೋಟ್ ಮಾಡಿದ್ದೇನೆ. ಮಾನ್ಯ ಅಧ್ಯಕ್ಷರೆ, ಇದಾದ ಮೇಲೆ ಈ 250 ಎಕರೆ ಏನು ಸರ್ಕಾರಿ ಆದೇಶ ಮಾಡಿದೆ, ಇದಾದ ಮೇಲೆ ಅರಣ್ಯ ಇಲಾಖೆ ಇದನ್ನು ಸ್ವಾಧೀನಕ್ಕೆ ತೆಗೆದುಕೊಂಡಿರುವುದು ತಮ್ಮ ಗಮನಕ್ಕೆ ಕೊಡುತ್ತಿದ್ದೇನೆ. ಆಮೇಲೆ ದಾಖಲಾತಿ ತಮಗೆ ಕಳುಹಿಸಿಕೊಡುತ್ತೇನೆ. ಈ ಎರಡು ಆದೇಶದಲ್ಲಿ ಆದಂಥ ಇದನ್ನು ಅರಣ್ಯ ಇಲಾಖೆ 250 ಎಕರೆಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತದೆ. ಈ 250 ಎಕರೆಯನ್ನು ಸ್ವಾಧೀನಕ್ಕೆ ತೆಗೆದು ಕೊಂಡಿರುವುದನ್ನು ದಾಖಲೆಯನ್ನು ತಮ್ಮ ಗಮನಕ್ಕೆ ಕಳುಹಿಸಿ ಕೊಡುತ್ತೇನೆ. 250 ಎಕರೆ ಸ್ವಾಮಿ. ಇದಲ್ಲದೇ 11–2–2003ರಲ್ಲಿ 250 ಎಕರೆ mutation ಆಗುತ್ತದೆ. Mutation, ಎಲ್ಲಾ ಪ್ರತಿಯೊಂದು ಆಗುತ್ತದೆ. Mutation ಆಗಿ, ಅರಣ್ಯ ಭೂಮಿಗೆ ದಾಖಲೆ ಪ್ರಕಾರ Mutation ಪ್ರತಿಯೊಂದು ಎಲ್ಲಾ ಅಗುತ್ತದೆ. ಆ ಇಲಾಖೆಯವರು ಎಲ್ಲಾ ಮಾಡಿಸುತ್ತಾರೆ. ಇದಾದ ಮೇಲೆ ಮಾನ್ಯ ಅಧ್ಯಕ್ಷರೆ, records of right, ಗೇಣಿ ಮತ್ತು ಪಾಣಿ ಪತ್ರಿಕೆಗಳಲ್ಲಿ ಗೋಮಾಳ ಜಮೀನು 150 ಎಕರೆ ಅರಣ್ಯ ಇಲಾಖೆಯಿಂದ ಸ್ಪಷ್ಟವಾಗಿ ದಾಖಲೆಯಾಗುತ್ತದೆ. ಈ

ಜಮೀನು ಪಾಣಿ ಮತ್ತು ಎಲ್ಲಾ ಇದರಲಿ, ಈ ಜಮೀನು ಗೋಮಾಳ ಮತ್ತು ಅರಣ್ಯ ಇಲಾಖೆಯಿಂದ ದಾಖಲಾಗುತ್ತದೆ. ಇದು ಎಷ್ಟು ಆಗುತ್ತದೆ ಎಂದು ನನಗೆ ಗೊತ್ತಿಲ್ಲ. ಎಲ್ಲಾ ಬಚ್ಚೇಗೌಡರಿಗೆ ಗೊತ್ತಿದೆ. ಬೇಕಾದರೆ ನೀವು ನೇರವಾಗಿ clarification ತೆಗೆದುಕೊಳ್ಳಿ. (ಗೊಂದಲ) ನಿಮ್ಮ ಮೇಲೆ ನಾನು ಒಂದು ಚೂರು ಏನೂ ಹೇಳಿಲ್ಲ. ತಾವು ತಪ್ಪು ತಿಳಿದುಕೊಳ್ಳಬೇಡಿ. ನಿಮ್ಮದೇನೂ ಇಲ್ಲ. ಏಕೆ ನೀವು ತಲೆ ಕೆಡಿಸಿಕೊಳ್ಳುತ್ತೀರಿ ಸಾರ್? ದಯಮಾಡಿ ಶಾಂತ ರೀತಿಯಿಂದ ಇರಿ. ಈಗ ಮಾನ್ಯ ಅಧ್ಯಕ್ಷರೆ, ಈ 316 ಎಕರೆಯಲ್ಲಿ ಅರಣ್ಯ ಇಲಾಖೆ ಮತ್ತು forest ಗೋಮಾಳ ಎಂದು ಎರಡೂ ಪಾಣಿಯಲ್ಲಿ ದಾಖಲಾತಿ ಆಗಿದೆ. ಮಾನ್ಯ ಅಧ್ಯಕ್ಷರೆ, ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಇದಾದ ಮೇಲೆ 1976 ರಿಂದ 1981ರವರೆಗೆ ಸುಮಾರು 228 ಅರಣ್ಯ ಇಲಾಖೆಯಲ್ಲಿ, ಈ 250 ಎಕರೆಯೊಳಗೆ, 226 ಎಕರೆ ಜಮೀನಿನಲ್ಲಿ ಅರಣ್ಯ ಇಲಾಖೆಯವರು ನೆಡುತೋಪನ್ನು ಅಂದರೆ ಹುಣಸೇಗಿಡ ಇರಬಹುದು, ನೀಲಗಿರಿ ಗಿಡ ಇರಬಹುದು, ಕೆಲವು ಹಲವಾರು ಜಾತಿಯ ಮರಗಳನ್ನು ನೆಟ್ಟಿದ್ದಾರೆ. ಮರಗಳನ್ನು ನೆಟ್ಟ ಮೇಲೆ ಸುಮಾರು 30 ವರ್ಷ auction ಮಾಡಿದ್ದಾರೆ. ಅಲ್ಲಿ ಬರುವಂಥ ಫಸಲುಗಳನ್ನು ಅಂದರೆ ಹುಣಸೆ ಇರಬಹುದು ಅಥವಾ ಅರಣ್ಯ ಇಲಾಖೆಯಲ್ಲಿ ಬೆಳೆದಂಥ ಮರಗಳನ್ನು 30 ವರ್ಷಗಳ ಕಾಲ ಅರಣ್ಯ ಇಲಾಖೆಯವರು ಪ್ರತಿ ವರ್ಷ ಹರಾಜು ಮಾಡಿಕೊಂಡು ಬಂದಿರುವುದು ಇದೆ. ಅದನ್ನು ಸಹ ತಮ್ಮ ಗಮನಕ್ಕೆ ದಾಖಲಾತಿಯನ್ನು ಕಳುಹಿಸಿಕೊಡುತ್ತೇನೆ. 226 ಎಕರೆ ಜಮೀನಿನಲ್ಲಿ ಅರಣ್ಯ ಇಲಾಖೆಯವರು ನೆಡುತೋಪು, ಹುಣಸೇಗಿಡ ಈ ರೀತಿಯ ಪ್ರತಿಯೊಂದು ಮರಗಳನ್ನು ಹರಾಜು ಮಾಡಿರುವ ದಾಖಲೆ ಇದೆ ತಮಗೆ ಕಳುಹಿಸಿಕೊಡುತ್ತೇನೆ ಮಾನ್ಯ ಅಧ್ಯಕ್ಷರೇ. 30 ವರ್ಷಗಳವರೆಗೆ ಈ 226 ಎಕರೆ ಜಮೀನನ್ನು ಅರಣ್ಯ ಇಲಾಖೆಯವರು ಮಾಡಿರುವಂಥ ಎಲ್ಲಾ ದಾಖಲೆಗಳು ಇದ್ದರೂ ಸಹ ಇದನ್ನು ಅರಣ್ಯ ಇಲಾಖೆಯಿಂದ ಬೇರೆ ಕಡೆಗೆ ವರ್ಗಾವಣೆ ಮಾಡುವುದಕ್ಕೆ ಚಿತಾವಣೆ ಕೊಟ್ಟಂಥವರು ಯಾರು? ಯಾವ ಅಧಿಕಾರಿ ಕೊಟ್ಟಿರುವುದು? ಅರಣ್ಯ ಇಲಾಖೆ ಕೊಟ್ಟಂಥ ಜಮೀನನ್ನು ಬೇರೆ ಗೋಮಾಳ ಜಮೀನು ಇರಬಹುದು, ಅರಣ್ಯ ಇಲಾಖೆ ಜಮೀನು ಇರಬಹುದು, ಯಾರಿಗಾದರೂ ಮಂಜೂರಾತಿ ಮಾಡುವುದಕ್ಕೆ ಕಾನೂನಿನಲ್ಲಿ, ಕಾಯ್ದೆಯಲ್ಲಿ ಇದೆಯೆ ಸ್ವಾಮಿ? ದಯಮಾಡಿ ನಾನು ಅರಣ್ಯ ಸಚಿವರನ್ನು ಮತ್ತು ಕಂದಾಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಏಕೆಂದರೆ ಇದು ನನ್ನ ಪ್ರಶ್ನೆ ಅಲ್ಲ. ರೇವಣ್ಣನ ಪ್ರಶ್ನೆ ಅಲ್ಲ. ರಾಜ್ಯದ 5 ಕೋಟಿ ಜನ, ಇವತ್ತು ಅರಣ್ಯ ಉಳಿಸಬೇಕು ಎಂದು ಏನು ಸುಪ್ರೀಂ ಕೋರ್ಟ್ ನಿರ್ದೇಶನ ಕೊಟ್ಟಿದೆ, ಚಿಕ್ಕಮಗಳೂರು ಜಿಲ್ಲೆಯೊಳಗೆ 2 ಎಕರೆ, 1 ಎಕರೆ ಉಳುಮೆ ಮಾಡಿಕೊಂಡಿರುವ ಬಡವರನ್ನು ಅರಣ್ಯ ಇಲಾಖೆಯವರು ಎತ್ತಿ ಎಸೆದರು.

1.30 pm

ಇವತ್ತು ಮೂರು ಸಾವಿರ ಕುಟುಂಬದವರನ್ನು ರಸ್ತೆಗೆ ಬಿಸಾಕಿದರು. ಬೇಕಾದರೆ ಮಾಹಿತಿಯನ್ನು ತೆಗೆದು ನೋಡಿ. ಮಾನ್ಯ ರುದ್ರೇಶಗೌಡರು ಮಲೆನಾಡು ಭಾಗದವರು ಅವರಿಗೆ ಗೊತ್ತಿರುತ್ತದೆ. ನಾನು ಹೇಳುವುದಕ್ಕೆ ಹೋದರೆ, ರೇವಣ್ಣನವರು ರಾಜಕೀಯವಾಗಿ ಹೇಳಿದರು ಎಂದಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆದಂಥ ಘಟನೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 50 ಎಕರೆ ಜಮೀನಿನಲ್ಲಿ 226 ಎಕರೆ ಜಮೀನಿನಲ್ಲಿ ಅರಣ್ಯ ಇಲಾಖೆಯವರು ಗಿಡಗಳನ್ನು ನೆಡಿಸಿರುವುದು, ಫಸಲು ತೆಗೆದುಕೊಂಡು ಹರಾಜು ಹಾಕಿರುವ ಎಲ್ಲಾ ದಾಖಲೆಗಳನ್ನು ನಿಮಗೆ ಕೊಡುತ್ತಿದ್ದೇನೆ. ದಿನಾಂಕ 3–4–1996ರಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಕೋಲಾರ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿ ಕಾರಿಯವರಿಗೆ ಬರೆದಿರುವ ಪತ್ರವನ್ನು ತಮಗೆ ಕೊಡುತ್ತೇನೆ. ಇಲ್ಲಿ ದಾಖಲೆ ಇದೆ. ಓದಬೇಕೆಂದರೆ ಓದುತ್ತೇನೆ. ಇಲ್ಲವೆಂದರೆ ದಾಖಲೆಗಳನ್ನು ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತೇನೆ. ಸಮಯವನ್ನು ವ್ಯರ್ಥ ಮಾಡುವುದು ಬೇಡ. ಕಳುಹಿಸಿಕೊಡುತ್ತೇನೆ. ಆ ಪತ್ರದಲ್ಲಿಯೇ ಬೈಲಸಂದ್ರ ಅರಣ್ಯ ವಲಯದ ವ್ಯಾಪ್ತಿಗೆ ಬರುವ ಸದರಿ ತೆನೆಯೂರು ಗ್ರಾಮದ ಅರಣ್ಯ ಭೂಮಿಯಲ್ಲಿ 143.69 ಹೆಕ್ಟೇರ್, ನೆಡುತೋಪು ಬೆಳೆಸಿರುವ ಅಂಶವನ್ನು ಸ್ಪಷ್ಟವಾಗಿ ದಾಖಲಿಸಲಾಗಿದೆ. ಇದನ್ನು ನಾನು ಬರೆಯುತ್ತಿಲ್ಲ. ನಾಲ್ಕೈದು ದಾಖಲೆಗಳಿವೆ, annexures ಮಾಡಿದ್ದೇನೆ, ಅವುಗಳನ್ನು ತಮ್ಮ ಗಮನಕ್ಕೆ ಕಳುಹಿಸಿ ಕೊಡುತ್ತೇನೆ. ಇದಲ್ಲದೇ ಇನ್ನೊಂದು ಮುಖ್ಯಾಂಶವೆಂದರೆ, 1966ರಲ್ಲಿ 250 ಎಕರೆ ಅರಣ್ಯ ಇಲಾಖೆಗೆ ವರ್ಗಾವಣೆಯಾಗಿದೆ. ಅರಣ್ಯ ಕಾನೂನು 1963ರ ಸೆಕ್ಷನ್ 4 ರಿಂದ 17ರ ಪ್ರಕಾರ 2009ರವರೆಗೆ ಈ ಜಮೀನು ಸಂಪೂರ್ಣವಾಗಿ ಅರಣ್ಯ ಇಲಾಖೆಗೆ ದಾಖಲಿಸಿಕೊಳ್ಳಲು, ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಇರಬಹುದು, ಇದರಲ್ಲಿ ಏನೇನು ನಡೆಸಿದ್ದಾರೆ ಎನ್ನುವುದು ಒಂದು enquiry

ಮಾಡಿದಾಗ ಗೊತ್ತಾಗುತ್ತದೆ. ಏಕೆಂದರೆ, ಸುಪ್ರೀಂ ಕೋರ್ಟ್ ಏನು ಒಂದು direction ಅನ್ನು ಕೊಟ್ಟಿದೆ, ಅದನ್ನು ಕಾನೂನು ರೀತಿಯಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಇರಬಹುದು, ಕಂದಾಯ ಇಲಾಖೆಯ ಅಧಿಕಾರಿಗಳು ಇರಬಹುದು ಯಾವ ರೀತಿ ಪಾಲನೆ ಮಾಡುತ್ತಿದ್ದರೋ, ಇಲ್ಲವೋ ಎನ್ನುವ ಅಂಶಗಳು ಇದರಲ್ಲಿ ಅಡಗಿದೆ. ಇದಲ್ಲದೇ ತೆನೆಯೂರು ಗ್ರಾಮದ ಸರ್ವೆ ನಂ. 17ಕ್ಕೆ ಸಂಬಂಧಿಸಿದಂತೆ ಸರ್ಕಾರ 30 ವರ್ಷದಿಂದ ಕೋಟ್ಯಾಂತರ ರೂಪಾಯಿಗಳ ಆದಾಯವನ್ನು ಪಡೆದಿದೆ. 250 ಎಕರೆಯಲ್ಲಿ ನೆಡುತೋಪು ಮಾಡಿರುವುದರಲ್ಲಿ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಎಷ್ಟು ಆದಾಯ ಪಡೆದಿದೆ ಎನ್ನುವ ದಾಖಲೆಗಳನ್ನು ಅಧಿಕಾರಿಗಳು ಹೇಳಲಿ. 30 ವರ್ಷದಿಂದ ಸರ್ಕಾರಕ್ಕೆ ಎಷ್ಟು ಆದಾಯ ಬಂದಿದೆ? ಸರ್ಕಾರಕ್ಕೆ ನೆಡುತೋಪು ಇತ್ತೋ ಇಲ್ಲವೋ? ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು, ಸಚಿವರು ಇದ್ದಾರೆ ಅವರೇ ಹೇಳಲಿ. 2003ರಲ್ಲಿ 250 (150+100) ಎಕರೆ ಪ್ರದೇಶದಲ್ಲಿ ಕೆಲವರು 1930ರಲ್ಲೇ ಮಂಜೂರಾತಿಯಾಗಿದೆ ಎಂದು ಹೇಳುತ್ತಾರೆ. 316 ಎಕರೆ 1930ರಲ್ಲೇ ಮಂಜೂರಾತಿಯಾಗಿದ್ದರೆ, ಎಷ್ಟು ವರ್ಷವಾಯಿತು? ಈಗ 2009ನೇ ಇಸವಿ ನಡೆಯುತ್ತಿದೆ. ಯಾರಿಗೆ ಮಂಜೂರಾತಿ ಆಗಿರುತ್ತದೆ ಅವರಿಗೆ 79 ವರ್ಷ ಆಗಿರಬೇಕು. ಯಾರಿಗೆ ಮಂಜೂರಾತಿ ಆಗಿದೆ ಅವರಿಗೆ 79 ವರ್ಷ ವಯಸ್ಸಾಗಿದೆಯೇ ಎನ್ನುವುದನ್ನು ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳು ಸದನಕ್ಕೆ ಹೇಳಬೇಕು. ಯಾರಿಗೆ ಮಂಜೂರಾತಿ ಆಗಿದೆ ಅವರ ageಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಸೋಮವಾರ ಬೆಳಗ್ಗೆ ತರಿಸಿಕೊಡಲಿ. ಯಾರೋ ತಹಶೀಲ್ದಾರರು, ಕಂದಾಯ ಇಲಾಖೆ ಮತ್ತು ಕೆಲವು ಅಧಿಕಾರಿಗಳು ಸೇರಿಕೊಂಡು ಬೋಗಸ್ ನಡೆಸುತ್ತಿದ್ದಾರೆ. ಯಾವ ರೀತಿ ನಡೆಸುತ್ತಿದ್ದಾರೆ ಎನ್ನುವುದನ್ನು ಕೆಲವು ದಾಖಲೆ ಸಮೇತ ತಮಗೆ ಮನವರಿಕೆ ಮಾಡಿಕೊಡುತ್ತಿದ್ದೇನೆ. 1979 ಇಸವಿ ಎಂದರೆ, ಹುಟ್ಟಿದ ಮಗುವಿಗೆ ಮಾಡಿದ್ದಾರೆ, ಯಾರಿಗೆ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಯಾರಿಗೆ ಮಂಜೂರಾತಿಯಾಗಿದೆ? ಮಂಜೂರಾತಿಯಾಗಿರುವವರು ನಿಜವಾಗಿಯೂ ಇದ್ದಾರೆಯೇ? ತಹಶೀಲ್ದಾರರು ಗೋಮಾಳ ಜಮೀನನ್ನು, ಅರಣ್ಯ ಜಮೀನನ್ನು ಮಂಜೂರಾತಿ ಮಾಡುವುದಕ್ಕೆ ಬರುತ್ತದೆಯೇ? ಕಾನೂನಿನಲ್ಲಿ ಗೋಮಾಳ ಜಮೀನು ಆಗಲಿ, ಅರಣ್ಯ ಇಲಾಖೆ ಜಮೀನು ಆಗಲಿ, ಒಂದು ಗಂಟೆ ಜಮೀನನ್ನು ಯಾರಿಗೂ ಮಂಜೂರಾತಿ ಮಾಡುವುದಕ್ಕೆ ಅವಕಾಶವಿಲ್ಲ ಎಂದು ನಾನು ಹೇಳುತ್ತಿಲ್ಲ. ರಾಜ್ಯದ ಕಂದಾಯ ಇಲಾಖೆಯ ಪ್ರಧಾನ

ಕಾರ್ಯದರ್ಶಿಯಾಗಿದ್ದ ಮಾನ್ಯ ಜಾಮ್‌ದಾರ್ ಅನ್ನುವರು ಬರೆದಿರುವಂಥ ಪತ್ರವನ್ನು ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತಿದ್ದೇನೆ. ಅದನ್ನು violate ಮಾಡಿ ಯಾವ ಅಧಿಕಾರಿಗಳು ಮಾಡಿದ್ದಾರೆ ಎನ್ನುವುದನ್ನು ಬೆಳಕು ಚೆಲ್ಲಬೇಕಾಗುತ್ತದೆ. ಒಬ್ಬರು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೇ ಪತ್ರ ಬರೆದಿರುವುದನ್ನು ಯಾರು ಆದೇಶ ಉಲ್ಲಂಘನೆ ಮಾಡಿದರು? ಇದರ ಹಿಂದೆ ಯಾರಿದ್ದರು? ಎನ್ನುವುದನ್ನು ದಯಮಾಡಿ ಸರ್ಕಾರ ಹೇಳಬೇಕು ಅಥವಾ ಕಂದಾಯ ಇಲಾಖೆ ಅಥವಾ ಅರಣ್ಯ ಇಲಾಖೆ ಇರಬಹುದು ಅವರು ಹೇಳಲಿ. ಏಕೆಂದರೆ, ನಾನು ದಾಖಲಾತಿಗಳ ಸಮೇತ ಮಾತನಾಡುತ್ತಿದ್ದೇನೆ. ದಾಖಲಾತಿ ಬಿಟ್ಟು ಯಾವುದನ್ನೂ ಮಾತನಾಡುತ್ತಿಲ್ಲ.

(ಈ ಹಂತದಲ್ಲಿ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಉದಾಹರಣೆಗೆ ಕ್ರೈಮ್ ನಂ. 6, 208, 1930ನೇ ಇಸವಿಯಿಂದ ಮಾಡುತ್ತಿದ್ದಂಥ ಜಮೀನನ್ನು 2008ರಲ್ಲಿ ಅರಣ್ಯ ಇಲಾಖೆಯವರು complaint ಅನ್ನು ಏಕೆ ಕೊಡುತ್ತಾರೆ? B.N. Byregowda and others, complaint ಬೇಲಪ್ಪ, ಮೇಲುಕೊಪ್ಪ ಅಧ್ಯಕ್ಷರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ, ಶ್ರೀನಿವಾಸಪುರ ರೇಂಜ್, ಅವರು 2008ರಲ್ಲಿ ತೆನೆಯೂರಿನ ಸರ್ವೆ ನಂ.17, 631/2 ಎಕರೆ ಜಮೀನನ್ನು ಒತ್ತುವರಿ ಮಾಡುತ್ತಿದ್ದಾರೆ ಎಂದು, WIS 114, 441, 42, 30 ಐಪಿಸಿ ಎಂದು ಹೇಳಿದ್ದಾರೆ. ಅರಣ್ಯ ಇಲಾಖೆಯವರು ಕೊಟ್ಟಿರುವ (complaint) ಅನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೋರ್ಟಿನ ವಿಷಯದ ಬಗ್ಗೆ ನಾನು ಮಾತನಾಡುತ್ತಿಲ್ಲ. ಅರಣ್ಯ ಇಲಾಖೆಯವರು ಕೊಟ್ಟ ಕಂಪ್ಲೆಂಟ್ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇನೆ ಮತ್ತು ಅದನ್ನು ತಮ್ಮ ಗಮನಕ್ಕೂ ಮಾನ್ಯ ಮಂತ್ರಿಗಳು ಕಳುಹಿಸಿಕೊಟ್ಟರು. ಅರಣ್ಯ ಇಲಾಖೆಯವರು 2008ರಲ್ಲಿ ಹಾಕಿದ ಕೇಸ್ ನಂಬರ್ ಹೇಳಿದ್ದಾರೆ. ಕೇಸ್ ನಂ. 33264/2008-09. ಅದನ್ನು ತಮ್ಮ ಗಮನಕ್ಕೆ ತಂದರು. ಆ ಕುರಿತಾದ ಕಡತ ನಿಮ್ಮ ಬಳಿ ಇದೆ, ನನ್ನ ಹತ್ತಿರ ಇಲ್ಲ. ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಪರಿಸ್ಥಿತಿಯಲ್ಲಿ ಹೊಸಕೋಟೆಯಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅಧಿಕಾರಿಗಳೊಂದಿಗೆ ಶಾಮೀಲಾಗಿದ್ದಾರೆ. ಈಗಿನ ಕಂದಾಯ ಸಚಿವರು ಮಾಡುತ್ತಿದ್ದಾರೆಂದು ಹೇಳುತ್ತಿಲ್ಲ. ಅವರ ಮೇಲೆ ಅಪಾದನೆಯನ್ನು ಮಾಡುತ್ತಿಲ್ಲ. ಅವರು ತಪ್ಪು ತಿಳಿದುಕೊಳ್ಳುವುದು ಬೇಡ. ಅದಕ್ಕೋಸ್ಕರ ನಾನು clear cut ಆಗಿ ಹೇಳುತ್ತಿದ್ದೇನೆ. ಮಾನ್ಯ ಕಂದಾಯ ಸಚಿವರೆ, ತಾವೇನಾದರೂ

ಮಾಡಿಸಿದ್ದೀರೇನೋ ಎನ್ನುವ ಭಾವನೆಯಿಲ್ಲ. ಇದು ತಮ್ಮ ಗಮನಕ್ಕೂ ಬಂದಿಲ್ಲ. ಇಲ್ಲಿ ಕಂದಾಯ ಇಲಾಖಾಧಿಕಾರಿಗಳು ಯಾವ ರೀತಿ ಫ್ರಾಡ್ ಮಾಡುತ್ತಿದ್ದಾರೆಂದರೆ, ಒಬ್ಬರು ಪ್ರಾಮಾಣಿಕ ಅಧಿಕಾರಿಗಳನ್ನು ವಿವರವಾದ ತನಿಖೆಗೆ ಕಳುಹಿಸಿಕೊಡಬೇಕು. ಜಾಮ್‌ದಾರ್ ಸಾಹೇಬರು ಇದ್ದಾರಲ್ಲ, ಅವರನ್ನೇ ಕಳುಹಿಸಿಕೊಡಿ. ಅವರು ಹಿಂದೆ ಕಂದಾಯ ಇಲಾಖೆಯ ಕಾರ್ಯದರ್ಶಿಗಳಾಗಿದ್ದರು. ಅಧಿಕಾರಿಗಳು ಏನೇನು ಫ್ರಾಡ್ ಮಾಡುತ್ತಿದ್ದಾರೆಂದರೆ, ಸರ್ಕಾರದ ಬೊಕ್ಕಸ, ಆಸ್ತಿಯನ್ನು ಯಾವ ರೀತಿ ಲೂಟಿ ಮಾಡುತ್ತಿದ್ದಾರೆಂದರೆ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಪಕ್ಕ ಇರುವ ಜಾಗ ಇದಾಗಿದೆ. ಈ ಜಾಗ ಬೇರೆ ಕಡೆ ಇಲ್ಲ. ಒಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಅಲ್ಲಿ ಬರದೇ ಇದ್ದಿದ್ದರೆ ಅಲ್ಲಿಗೆ ಯಾರೂ ಜಮೀನು ಉಳುವುದಕ್ಕೆ ಹೋಗುತ್ತಿರಲಿಲ್ಲ ಮತ್ತು ಯಾರೂ ಒತ್ತುವರಿ ಮಾಡುವುದಕ್ಕೂ ಹೋಗುತ್ತಿರಲಿಲ್ಲ. ಅದೊಂದೇ ಕಾರಣಕ್ಕೋಸ್ಕರ ಇವತ್ತು ಈ ಜಮೀನಿನ ಒತ್ತುವರಿ ನಡೆಯುತ್ತಿದೆಯೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಲ್ಲಿ 316 ಎಕರೆ ಇದ್ದು, 250 ಎಕರೆ ಫಾರೆಸ್ಟ್‌ಗೆ ಹೋಯಿತು. ಇನ್ನು 100 ಎಕರೆ ಇದೆ. ನಾನು ಹೇಳುವುದೇನೆಂದರೆ, ಯಾವ ಉದ್ದೇಶಕ್ಕೋಸ್ಕರ ಇದು ಪತ್ರಿಕೆಗಳಲ್ಲಿ ಬರುತ್ತಿದೆ? ಮೊನ್ನೆ ಈ tv ಚಾನೆಲ್‌ನಲ್ಲಿ ಬಂದಿದೆ. ಇಂತಹ ಲೂಟಿ ನಡೆಯುತ್ತಿರುವುದನ್ನು ಸದನದ ಗಮನಕ್ಕೆ ತರಬೇಕೇ? ಬೇಡವೇ? ನಾನು ಕಂದಾಯ ಮತ್ತು ಅರಣ್ಯ ಇಲಾಖಾ ಸಚಿವರನ್ನು ಕೇಳುವುದಿಷ್ಟೆ. ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ಗೋಮಾಣ ಜಮೀನು ಎಷ್ಟು ಎಕರೆ ಇದೆ? ಅರಣ್ಯ ಇಲಾಖೆಗೆ ಕೊಟ್ಟ ಜಮೀನು ಎಷ್ಟು? 1963ರಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 32 ಎಲ್‌ಡಿ 62 ದಿನಾಂಕ 20-6-1965ರ ಪ್ರಕಾರ 316 ಎಕರೆಯಲ್ಲಿ 250 ಎಕರೆ ಕೊಟ್ಟಿರುವುದು ನಿಜವೇ? ಅಲ್ಲವೇ? ಈ 316 ಎಕರೆಯಲ್ಲಿ 250 ಎಕರೆ ಇವೆರಡನ್ನೂ ಸರ್ಕಾರಿ ಆದೇಶದಲ್ಲಿ ಕೊಟ್ಟಿರುವುದು ನಿಜವೇ? ಅಲ್ಲವೇ? ಎನ್ನುವುದರ ಬಗ್ಗೆ ನಮ್ಮ ಅರಣ್ಯ ಮತ್ತು ಕಂದಾಯ ಇಲಾಖೆಯ ಮಂತ್ರಿಗಳನ್ನು ಮಾನ್ಯ ಸಭಾಧ್ಯಕ್ಷರ ಮುಖಾಂತರ ಕೇಳುತ್ತಿದ್ದೇನೆ. ಈ ಪರಿಸ್ಥಿತಿ ಆದನಂತರ 2006ರಲ್ಲಿ ಕರ್ನಾಟಕ ಅರಣ್ಯ ಕೈಗಾರಿಕಾ ನಿಗಮದ ವತಿಯಿಂದ ಮೇಲ್ಕಂಡ ಅರಣ್ಯ ಪ್ರದೇಶದಲ್ಲಿ ನೀಲಗಿರಿ ಬೆಳೆದಿದ್ದರಲ್ಲ, ನೆಡುತೋಪು ಮತ್ತು ನೀಲಗಿರಿ ಬೆಳೆಸಿರುವುದು ಮತ್ತು ಅದನ್ನು ಕಟಾವು ಮಾಡಿಸಿರುವುದಕ್ಕೆ ದಾಖಲೆ ಇದೆ. ಬೇಕಾದರೆ ತೆಗೆಸಿ ನೋಡಿ. ನೀಲಗಿರಿ

ಬೆಳೆದು ಕಟಾವು ಮಾಡಿದ್ದಾರೆ. ಈ ಜಾಗ ಸರ್ಕಾರಕ್ಕೆ ವರಮಾನ ತಂದು ಕೊಟ್ಟಿದೆ. 250 ಎಕರೆ ಪ್ರದೇಶದಲ್ಲಿ ನೀಲಗಿರಿ ಬೆಳೆದಿರುವುದಿದೆ. ಬೇಕಾದರೆ ಆ ಕುರಿತಾದ ಕಡತ ತೆಗೆಸಿ, ನಿಮಗೆ ದಾಖಲೆ ಕೊಡುತ್ತೇನೆ. ನಿಮಗೆ ದಾಖಲೆ ಬೇಕೆಂದರೆ ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತಿದ್ದೇನೆ. 350 ಎಕರೆ ಪ್ರದೇಶದಲ್ಲಿ ನೀಲಗಿರಿ ತೋಪು ಬೆಳೆದಿದ್ದಾರೆ. ಆ ಕುರಿತ ದಾಖಲೆಯನ್ನು ತಮಗೆ ಕೊಡುತ್ತೇನೆ.

ಕೆಲವು ಪ್ರಭಾವಿಗಳೆಂದರೆ, ಕೆಲವರಿಗೆ ಒಂದು ತರಹ ನೋವಾಗುತ್ತದೆ. ಅದನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ನನಗೇಕೆ ಬೇಕು? ಒಟ್ಟಿನಲ್ಲಿ ಅರಣ್ಯ ಇಲಾಖೆ ಜಮೀನು ಉಳಿದುಕೊಳ್ಳಬೇಕು, ಗೋಮಾಳ ಜಮೀನು ಉಳಿದುಕೊಳ್ಳಬೇಕು, ಇವೆರಡೂ ಆಗಬೇಕು, ಸರ್ಕಾರದ್ದು ಸುಮಾರು 150 ರಿಂದ 200 ಕೋಟಿ ರೂಪಾಯಿಗಳಾಗುತ್ತದೆ. ಏಕೆಂದರೆ, ಮೊನ್ನೆ, ಹೌಸಿಂಗ್ ಬೋರ್ಡ್ ಲ್ಯಾಂಡ್ ಕುರಿತಂತೆ ತಮ್ಮ ಗಮನಕ್ಕೆ ತಂದಿದ್ದೇವೆ. ಅದರಲ್ಲಿ 50 ಲಕ್ಷ ರೂ. ಇದಕ್ಕಿಂತಲೂ 20 ಕಿಲೋಮೀಟರ್‌ಗಳಷ್ಟು ದೂರದ ದೇವನಹಳ್ಳಿ ಏರ್‌ಪೋರ್ಟ್ ಹತ್ತಿರ ಅಲ್ಲಿ 50 ಲಕ್ಷ... ದಾಖಲೆ ಕೊಟ್ಟಿದ್ದೇನೆ. ರೈತರಿಗೆ 5 ಲಕ್ಷ, ಮಂತ್ರಿಗಳ ತಮ್ಮನಿಗೆ 45 ಲಕ್ಷ, ಇದೇ ಆಗಬೇಕೆಂದರೆ ನಮ್ಮದೇನೂ ಅಭ್ಯಂತರವಿಲ್ಲ. ರೈತರಿಗೆ 5 ಲಕ್ಷ, ಮಂತ್ರಿಗಳ ತಮ್ಮನಿಗೆ 45 ಲಕ್ಷ, ಅಣ್ಣನಿಗೆ 45 ಲಕ್ಷ ಮಾಡಬೇಕೆಂದರೆ ನಮ್ಮದೇನೂ ಇಲ್ಲ. ಬಚ್ಚೇಗೌಡರೆ, ನೀವು ಮಾಡುತ್ತಿದ್ದೀರೆಂದು ನಾನು ಹೇಳುತ್ತಿಲ್ಲ. ನಾನು ಮಾಡಿದ್ದರೆ, ನನ್ನನ್ನು ತೆಗೆದು ಹಾಕಿ.

ಶ್ರೀ ಬಿ.ಎನ್. ಬಚ್ಚೇಗೌಡ: ಅದು ನಿಮ್ಮ ಪ್ರಾಕ್ಟಿಸ್.

ಶ್ರೀ ಹೆಚ್.ಡಿ. ರೇವಣ್ಣ: ನಾನು ಹೌಸಿಂಗ್‌ನಲ್ಲಿ ಮೂರುವರೆ ವರ್ಷಗಳ ಕಾಲ ಮಂತ್ರಿಯಾಗಿದ್ದೆ. ಮಾನ್ಯ ಮಂತ್ರಿಗಳಿಗೆ ಅದೊಂದನ್ನು ತನಿಖೆ ಮಾಡುವುದಕ್ಕೆ ಹೇಳಿ. ಎಲ್ಲವನ್ನೂ ತನಿಖೆ ಮಾಡುವುದಕ್ಕೆ ಕೊಟ್ಟಿರುವಾಗ ಇನ್ನು ಅದೊಂದನ್ನು ಮಾಡುವುದಕ್ಕೂ ಹೇಳಿಬಿಡಿ. ನಾನು ಮೂರುವರೆ ವರ್ಷ ಕಾಲ ಹೌಸಿಂಗ್ ಮಿನಿಸ್ಟರ್ ಆಗಿದ್ದೆನಲ್ಲ, ನಾನು ಎಲ್ಲೆಲ್ಲಿ ಜಮೀನು ತೆಗೆದುಕೊಂಡಿದ್ದೇನೆ, ಯಾರ್ಯಾರ ನೆಂಟರ ಹೆಸರಿನಲ್ಲಿ ತೆಗೆದುಕೊಂಡಿದ್ದೇನೆ ಎಂಬುದನ್ನೆಲ್ಲವನ್ನೂ ತನಿಖೆ ಮಾಡಿ ನನ್ನನ್ನು ಬೇಕಾದರೆ ಜೈಲಿಗೆ ಹಾಕಿ. ಅದಕ್ಕೆ ನಾನೇನೂ ಅರ್ಜಿ ಕೊಡುವುದಿಲ್ಲ. ಯಾರ ಹತ್ತಿರಕ್ಕೂ ಹೋಗುವುದಿಲ್ಲ, ಯಾರ ಮನೆ ಬಾಗಿಲಿಗೂ ಅರ್ಜಿ ತೆಗೆದುಕೊಂಡು ಹೋಗುವುದಿಲ್ಲ.

ಅವರಿಗೇನಾದರೂ ಅನುಮಾನವಿದ್ದರೆ, ನಾನು ಇಂಧನ ಇಲಾಖೆ ಮಂತ್ರಿಯಾಗಿದ್ದೆ, PWD ಮಂತ್ರಿಯಾಗಿದ್ದೆ... ಲೋಕಾಯುಕ್ತಕ್ಕೆ ಕಳುಹಿಸಿದ್ದಾರೆ. ನಾನು ಮೂರು ವರ್ಷ ಆರು ತಿಂಗಳು.. ..

ಅಧ್ಯಕ್ಷರು: ತಾವು ವಿಷಯಕ್ಕೆ ಬನ್ನಿ.

ಶ್ರೀ ಹೆಚ್.ಡಿ. ರೇವಣ್ಣ: ಅವರು ಹೇಳುತ್ತಿದ್ದಾರಲ್ಲ.. ..

ಶ್ರೀ ಬಿ.ಎನ್. ಬಚ್ಚೇಗೌಡ: ತಾವು Co-operation Minister ಆಗಿದ್ದಿರಿ, ಮುಖ್ಯಮಂತ್ರಿಗಳು ಮತ್ತು ನೀವು ಇಬ್ಬರೂ ಇದ್ದಿರಿ.

ಶ್ರೀ ಹೆಚ್.ಡಿ. ರೇವಣ್ಣ: ನಿಮ್ಮ ಭಾವನೆ ಹಾಗಿದ್ದರೆ, ಹಾಗೆಯೇ ಆಗಲಿ ಬಿಡಿ ಸ್ವಾಮಿ.

ಅಧ್ಯಕ್ಷರು: ಬೇರೆ ಬೇರೆ ವಿಷಯಗಳಿಗೆ ಏಕೆ ಹೋಗುತ್ತೀರಿ? ನೇರವಾಗಿ ವಿಷಯಕ್ಕೆ ಬನ್ನಿ.

ಶ್ರೀ ಬಿ.ಎನ್. ಬಚ್ಚೇಗೌಡ: ನೀವು ಮತ್ತು ನಿಮ್ಮ ತಮ್ಮ ಇಬ್ಬರೂ ಮುಖ್ಯಮಂತ್ರಿಗಳು, ನೀವು ಪವರ್ ಮಿನಿಸ್ಟರ್ ಆಗಿದ್ದಿರಿ, ಎಲ್ಲಾ ನೀವೇ ಆಗಿದ್ದಿರಿ, ನಾವು ನೋಡಿರಲಿಲ್ಲವೇ? ಎಲ್ಲಾ ಫೈಲೂ ನಿಮ್ಮ ಕಂಕುಳಲ್ಲಿಯೇ ಇತ್ತು. ಎಲ್ಲವನ್ನೂ ನೀವೇ ಮಾಡಿಸಿದ್ದು.

ಶ್ರೀ ಹೆಚ್.ಡಿ. ರೇವಣ್ಣ: ಅದು ಏನೆಂಬುದನ್ನು ಹೇಳಲಿ ಸ್ವಾಮಿ. ಅದೆಲ್ಲವನ್ನೂ ಹೇಳಲಿ, ತಾವು ಮಾತನಾಡಿ.

ಅಧ್ಯಕ್ಷರು: ತಾವು ಮುಂದುವರೆಸಿ.

ಶ್ರೀ ಹೆಚ್.ಡಿ. ರೇವಣ್ಣ: ಮಂತ್ರಿಗಳು ಮಾತನಾಡುವುದಕ್ಕೆ ನಿಂತಿದ್ದಾರೆ, ನಾನೇನು ಮಾತನಾಡುವುದು?

ಅಧ್ಯಕ್ಷರು: ನೀವು ವಿಷಯವನ್ನಷ್ಟೇ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಎಲ್ಲಿಯಾದರೂ 50 ಎಕರೆ ಜಮೀನನ್ನು ಮುಖ್ಯಮಂತ್ರಿಗಳಿಂದ ಡಿ–ನೋಟಿಫಿಕೇಶನ್ ಮಾಡಿಸಿರುವುದಿದ್ದರೆ ಅಥವಾ ಯಾವುದಾದರೂ ಜಮೀನನ್ನು ಮಂಜೂರಾತಿ ಮಾಡಿಸಿಕೊಂಡಿರುವುದು ಅಥವಾ Industrial Minister ಇಲ್ಲಿಯೇ ಇದ್ದಾರೆ, ನಮ್ಮ ಅಣ್ಣನವರು ಇದ್ದಾರಲ್ಲ, ಕಟ್ಟಾ ಸುಬ್ರಹ್ಮಣ್ಯನಾಯ್ಡುರವರು, ಅವರ ಹತ್ತಿರ ಯಾವುದಾದರೂ ಮಾಡಿಸಿದ್ದರೆ ಹೇಳಲಿ... ಏಕೆಂದರೆ, ಕಂಕುಳಿನಲ್ಲಿ ಫೈಲ್ ಇಟ್ಟುಕೊಂಡು ಓಡಾಡುತ್ತಿದ್ದರೆಂದು ಹೇಳುತ್ತಿದ್ದಾರಲ್ಲ.. .. ನಾನು ಈ ರಾಜ್ಯದ ಜನತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು .. ..

ಅಧ್ಯಕ್ಷರು: ನಿಮ್ಮ ಬಗ್ಗೆ ಯಾರೂ ಮಾತನಾಡಿಲ್ಲ. ನೀವೇಕೆ ಮಾತನಾಡುತ್ತೀರಿ? ನಿಮ್ಮ ಬಗ್ಗೆ ಅವರ್ಯಾರೂ ಹೇಳಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಈಗ ಹೇಳಿದರಲ್ಲ.

ಅಧ್ಯಕ್ಷರು: ನೀವು ಈ ವಿಷಯಕ್ಕೆ ಸಂಬಂಧಿಸಿದಂತೆ ಮಾತ್ರ ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಅವರು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ. ... ಮುಖ್ಯಮಂತ್ರಿ ಎರಡೂ ಆಗಿದ್ದರೆಂದು ಹೇಳಿದ್ದಾರಲ್ಲ, ಅದಕ್ಕೋಸ್ಕರ ಹೇಳುತ್ತಿದ್ದೇನೆ. ಅದು ಇರಲಿ. ಇದಾದ ನಂತರ, ದಿನಾಂಕ 18–12–2007ರಲ್ಲಿ ಹೊಸಕೋಟೆ ಅರಣ್ಯ ಇಲಾಖೆಯ ಅರಣ್ಯಾಧಿಕಾರಿಗಳು ದೊಡ್ಡಬಳ್ಳಾಪುರ ಎ.ಸಿ.ಯವರಿಗೆ ತೆನೆಯೂರಿನ ಸರ್ವೆ ನಂ. 17ರಲ್ಲಿ ದಿನಾಂಕ 13–12–2007ರಂದು ಕಂದಾಯ ಇಲಾಖೆಗೆ ಅರಣ್ಯ ಇಲಾಖೆಯಿಂದ ಮೋಜಣಿ ಕಾರ್ಯಕ್ರಮ ಜರುಗಿಸುವ ಕುರಿತಂತೆ ಒಂದು ಪತ್ರ ಬರೆಯುತ್ತಾರೆ. ಪತ್ರದಲ್ಲಿ "ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಒಂದನೆಯದು, ಸರ್ವೆ ನಂ. 17, ತೆನೆಯೂರು ಗ್ರಾಮಕ್ಕೆ ಸೇರಿದ ಗೋಮಾಳವು ಒಟ್ಟು 316.19 ಎಕರೆ ಜಮೀನು ಆಗಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 32 ಎಲ್‌ಡಿ 62 ದಿನಾಂಕ 28–7–1965ರಲ್ಲಿ 250 ಎಕರೆ ಜಮೀನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾವಣೆಯಾಗಿರುತ್ತದೆ. ಮೂರನೆಯದು, ಆದೇಶ ಸಂಖ್ಯೆ: 10407/A ದಿನಾಂಕ 29–5–2006ರಲ್ಲಿ 150 ಎಕರೆ ವಿಸ್ತೀರ್ಣಕ್ಕೆ ದಿನಾಂಕ 11–2–2003ರಲ್ಲಿ ತಮ್ಮ ಇಲಾಖೆಯಿಂದ ಮ್ಯುಟೇಶನ್ ಮಾಡಿಸಿರುತ್ತದೆ. ಇನ್ನುಳಿದ 100 ಎಕರೆ ಪ್ರದೇಶದ ವಿಸ್ತೀರ್ಣಕ್ಕೆ ಕಂದಾಯ ದಾಖಲೆಗಳಲ್ಲಿ 'ಅರಣ್ಯ'ವೆಂದು ನಮೂದು ಮಾಡಿ ಪಹಣೆ ಮತ್ತು ಮ್ಯುಟೇಶನ್ ನೀಡಬೇಕಾಗಿರುತ್ತದೆ. ಸದರಿ ಮೇಲ್ಕಂಡ ಪ್ರದೇಶದಲ್ಲಿ 1976 ರಿಂದ 1977–79, 1980–81... ಇಲಾಖೆಯಿಮದ 228.32 ಎಕರೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲಾಗಿರುತ್ತದೆ. 250 ಎಕರೆ ಪೈಕಿ 228.32 ಎಕರೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲಾಗಿರುತ್ತದೆಂದು ಬೆಂಗಳೂರು ಗ್ರಾಮಾಂತರ ಕಾರ್ಯ ಯೋಜನಾ ಪುಸ್ತಕದಿಂದ ತಿಳಿದು ಬಂದಿರುತ್ತದೆ.

ಅಂದರೆ 250 ಎಕರೆ ಜಾಗದಲ್ಲಿಯೇ 228.32 ಎಕರೆ ಜಮೀನಿನಲ್ಲಿ ನೆಡುತೋಪು ಬೆಳೆಸಲಾಗಿರುತ್ತದೆಂದು ಬೆಂಗಳೂರು ಗ್ರಾಮಾಂತರ ಕಾರ್ಯಯೋಜನೆ ಪುಸ್ತಕದಿಂದ ಅಂದರೆ ಸರ್ಕಾರಿ record ನಲ್ಲಿಯೇ ಇದೆ. ಇದಾದಮೇಲೆ, ಇದೇ ಲೆಟರ್‌ನಲ್ಲಿ, ಇದೇ ಪ್ರದೇಶದಲ್ಲಿ ತಮ್ಮ ಇಲಾಖೆಯಿಂದ

ಸುಮಾರು 40 ಜನರಿಗೆ 80 ಎಕರೆಯನ್ನು ಮಂಜೂರು ಮಾಡಿರುವುದು ಕಂಡು ಬರುತ್ತದೆ ಅಂದರೆ 2007ರಲ್ಲಿ 40–50 ಎಕರೆ ಪ್ರದೇಶವನ್ನು ಮಂಜೂರಾತಿ ಮಾಡಿರುವುದು ಕಂಡು ಬರುತ್ತಿದೆ ಎಂದು ಬರೆಯುತ್ತಾರೆ. ಇದಾದ ಮೇಲೆ, 2006ರಲ್ಲಿ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆಯಿಂದ ಮೇಲ್ಕಂಡ ಅರಣ್ಯ ಪ್ರದೇಶದಲ್ಲಿ ನೀಲಗಿರಿ ನೆಡುತೋಪನ್ನು ಕಟಾವಣೆ ಮಾಡಿದ ನಂತರ ಸಾರ್ವಜನಿಕರು ಕಂದಾಯ ಇಲಾಖೆಗೆ ಮಂಜೂರು ಮಾಡಿದ ಭೂಮಿ ಜಮೀನೆಂದು ಹೇಳಿಕೊಂಡು ಉಳುಮೆ ಮಾಡುತ್ತಿರುವುದು ಕಂಡು ಬರುತ್ತದೆ. Forest ಇಲಾಖೆ ಜಮೀನಿನಲ್ಲಿ ನೀಲಗಿರಿ ಬೆಳೆಸಿದರಲ್ಲ, ಅದನ್ನು ಕಟಾವು ಮಾಡಿಲ್ಲ ಅದಾದ ಮೇಲೆ ಕೆಲವು ಸಾರ್ವಜನಿಕರು ಉಳುಮೆ ಮಾಡುತ್ತಿರುವುದು ಕಂಡು ಬರುತ್ತದೆಂದು ಹೇಳುತ್ತಾರೆ. ಇದಾದ ಮೇಲೆ, 13–12 ರಂದು ಈ ಸಮಸ್ಯೆಯನ್ನು ಬಗೆ ಹರಿಸಲು ತಮ್ಮ ಇಲಾಖೆ ಹಾಗೂ ಅರಣ್ಯ ಇಲಾಖೆಯಿಂದ ಜಂಟಿ ಮೋಜಣಿ ಕಾರ್ಯವನ್ನು ನಡೆಸುತ್ತಿದ್ದ ಸಂದರ್ಭದಲ್ಲಿ ಕೆಲವು ಆಸಾಮಿಗಳು, ಸಾರ್ವಜನಿಕರು ಇಲಾಖೆಯ ಬಗ್ಗೆ ತಪ್ಪು ಮಾಹಿತಿ ನೀಡಿ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದರು. ಅಂದರೆ, ಸರ್ವೆ ಮಾಡುವುದಕ್ಕೆ ಹೊರಟವರನ್ನು ಓಡಿಸಿದ್ದಾರೆಂದು ಲೆಟರ್ ಬರೆಯುತ್ತಾರೆ. ಇದೆಲ್ಲ ಆದ ಮೇಲೆ ಈ ವಿಷಯವನ್ನು ದೊಡ್ಡಬಳ್ಳಾಪುರ ಎ.ಸಿ. ಯವರಿಗೆ ವಲಯ ಅರಣ್ಯಾಧಿಕಾರಿಗಳು ಅಂದರೆ, RFO ಹೊಸಕೋಟೆ ಇವರು ಲೆಟರ್ ಬರೆಯುತ್ತಾರೆ. ಅರಣ್ಯ ಸಂರಕ್ಷಣಾಧಿಕಾರಿಯವರು ಬೆಂಗಳೂರಿನ Chief Conservatorರವರಿಗೆ, Assistant Conservator of Forest, DFOರವರಿಗೆ ಬರೆದಿರುವ ಪತ್ರದ ಕಾಪಿಯನ್ನು ತಮ್ಮ ಗಮನಕ್ಕೆ ತರಲು ತಮಗೆ ಕಳುಹಿಸಿ ಕೊಡುತ್ತೇನೆ. ದಿನಾಂಕ 19–9–2007ರಲ್ಲಿ ಬೆಂಗಳೂರು ಗ್ರಾಮಾಂತರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅಂದರೆ DFO ರವರು ಬೆಂಗಳೂರು ಗ್ರಾಮಾಂತರದ ಡಿ.ಸಿ. ಯವರಿಗೆ ಲೆಟರ್ ಬರೆಯುತ್ತಾರೆ. ಏನೆಂದರೆ, ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಹೋಬಳಿ ತೆನ್ನೂರು ಗ್ರಾಮ ಸರ್ವೆ ನಂ. 17ರಲ್ಲಿ ಅರಣ್ಯ ಪ್ರದೇಶವನ್ನು ಅನಧಿಕೃತವಾಗಿ ಮಂಜೂರಾತಿ ಮಾಡಿರುವ ಬಗ್ಗೆ ಅಂದರೆ ಕೆಲವನ್ನು forgery ಯಾಗಿ ಮಂಜೂರಾತಿ ಮಾಡಿರುವ ಬಗ್ಗೆ ಪತ್ರ ಬರೆಯುತ್ತಾರೆ. ಮತ್ತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ–1ರ ಆದೇಶಾನುಸಾರ ತೆನೆಯೂರು ಗ್ರಾಮದ ಸರ್ವೆ ನಂ. 17ರಲ್ಲಿ 250 ಎಕರೆ ಪ್ರದೇಶವನ್ನು ಕಂದಾಯ ಇಲಾಖೆಯಿಂದ

ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ. ಸದರಿ ಪ್ರದೇಶದಲ್ಲಿ 1976, 1977, 1979, 1980, 1981ರಲ್ಲಿ ಇಲಾಖೆಯ ವತಿಯಿಂದ 228.32 ಎಕರೆ ಪ್ರದೇಶದಲ್ಲಿ ನೆಡುತೋಪನ್ನು ಬೆಳೆಸಲಾಗಿರುತ್ತದೆಂದು ಬೆಂಗಳೂರು ಗ್ರಾಮಾಂತರ ವಿಭಾಗದ ಕಾರ್ಯಯೋಜನೆಯ ಪುಸ್ತಕದಿಂದ ತಿಳಿದು ಬಂದಿರುತ್ತದೆಂದು DFO ರವರು ಬೆಂಗಳೂರಿನ ಡಿ.ಸಿ. ಯವರಿಗೆ ಪತ್ರ ಬರೆಯುತ್ತಾರೆ. ಇದಕ್ಕಿಂತ ದಾಖಲೆ ಬೇಕೇ? ಇದನ್ನು ನಾನು ಬರೆಯುತ್ತಿರುವುದಲ್ಲ. DFOರವರು 228 ಎಕರೆ ಜಮೀನಿನಲ್ಲಿ ನಾವು ನೆಡುತೋಪು ಬೆಳೆಸಿದ್ದೇವೆಂದು Deputy Commissionerರವರಿಗೆ ದಿನಾಂಕ 19-9-2007ರಲ್ಲಿ ಬರೆದಿರುವ ಪತ್ರವನ್ನೂ ತಮ್ಮ ಗಮನಕ್ಕೆ ತರಲು ತಮಗೆ ಕಳುಹಿಸಿ ಕೊಡುತ್ತೇನೆ. ಅರಣ್ಯ ಇಲಾಖೆಯ 1980ರ ಕಾಯ್ದೆ ಬಗ್ಗೆ ದಿನಾಂಕ 12-2-1996ರಲ್ಲಿ Supreme Court ಒಂದು ತೀರ್ಪು ಕೊಟ್ಟಿದೆ. ದಿನಾಂಕ 12-2-1996, ರಿಟ್ ಅರ್ಜಿ ಸಂ. 202/95 Supreme Court ನೀಡಿರುವ ತೀರ್ಪಿನ ವಿರುದ್ಧ ಅಂದರೆ, Supreme Court 1980ರ ಅರಣ್ಯ ಇಲಾಖೆಯ ಕಾಯ್ದೆಯ ಪ್ರಕಾರ ಯಾರೇ ಅರಣ್ಯ ಇಲಾಖೆಯ ಜಮೀನನ್ನು ಒತ್ತುವರಿ ಮಾಡುವುದಾಗಲಿ, ಮಂಜೂರಾತಿ ಮಾಡುವುದಾಗಲಿ ಮಾಡುವುದು ಕಂಡು ಬಂದಿದ್ದರೆ ಅಂಥವರ ಮೇಲೆ criminal case ಹಾಕಬೇಕೆನ್ನುವುದು ಇದೆ. Supreme Court ನವರು clear direction ಕೊಟ್ಟಿದ್ದಾರೆ. ಅದರ ಪ್ರಕಾರವೇ, ಚಿಕ್ಕಮಗಳೂರಿನಲ್ಲಿ 3000 ಕುಟುಂಬವನ್ನು ಡಿ.ಸಿ. ಯವರು ಹೊರಕ್ಕೆ ಹಾಕಿದ್ದರು. DFO ರವರು ಲೆಟರ್ ಬರೆದ ಮೇಲೆ ಈ ಜಿಲ್ಲಾಧಿಕಾರಿ ಏನು ಮಾಡುತ್ತಿದ್ದರು? ಇವರ ಅವರ ಪರ ಇದ್ದರೆ? ಇದು Supreme Court ಆದೇಶಕ್ಕೆ ವಿರುದ್ಧವಾಗಿದೆ. ಈ ಬಗ್ಗೆ Supreme Court ಆದೇಶವಿದ್ದರೂ ಸಹ ಅರಣ್ಯ ಇಲಾಖೆಯ ಒಬ್ಬ ಜಿಲ್ಲಾ ಮಟ್ಟದ ಅಧಿಕಾರಿ ಒಬ್ಬರು Deputy Commissioner ರವರಿಗೆ ಲೆಟರ್ ಬರೆದರೂ ಆ Deputy Commissioner ರವರು ಏನು ಮಾಡುತ್ತಿದ್ದರು ಎಂಬುದನ್ನು ನಾನು ಕಂದಾಯ ಮತ್ತು ಅರಣ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟಂಥ ದಾಖಲಾತಿಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತೆನೆಯೂರು ಗ್ರಾಮದಲ್ಲಿ ದಿನಾಂಕ 9-1-2008ರಂದು ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ವಿಭಾಗೀಯ ವ್ಯವಸ್ಥಾಪಕರು, ಹೊಸಕೋಟೆಯ ತಹಸೀಲ್ದಾರ್‌ರವರಿಗೆ ಪತ್ರ ಬರೆದು, ಪಟ್ಟಭದ್ರ ಹಿತಾಸಕ್ತಿಗಳು ಅರಣ್ಯ ಭೂಮಿಯನ್ನು ಕೈವಶಪಡಿಸಿಕೊಳ್ಳಲು ಗೂಂಡಾಗಿರಿ ಮತ್ತು ದೌರ್ಜನ್ಯ

ವೆಸಗಿದ್ದಾರೆಂಬುದನ್ನು ವಿವರವಾಗಿ ತಿಳಿಸಿದ್ದಾರೆ. ಈ ರೀತಿ ಲೆಟರ್ ಬರೆದಿರುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ವಿಭಾಗ, ಹೆಬ್ಬಾಳ್ ಇವರು ದಿನಾಂಕ 9–1–2008ರಂದು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮಕ್ಕೆ ಸೇರಿದ ಬೈಲಸಂದ್ರ ಗ್ರಾಮದ ವ್ಯಾಪ್ತಿಯಲ್ಲಿ 1996–97ನೇ ಸಾಲಿನಲ್ಲಿ ಬೆಳೆಸಿದ ಹುಣಸೆ ನೆಡುತೋಪಿನಲ್ಲಿ ಅತಿಕ್ರಮ ಪ್ರವೇಶ ಮಾಡಿ ಅಕ್ರಮ ಒತ್ತುವರಿ ಮಾಡಲು ಪ್ರಯತ್ನಿಸುತ್ತಿರುವ ಬಗ್ಗೆ ಹೊಸಕೋಟೆ ವಲಯ ಅರಣ್ಯಾಧಿಕಾರಿಯವರು ಪತ್ರ ಬರೆದಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದರಲ್ಲೇನು ಹೇಳುತ್ತಾರೆಂದರೆ, ಹೊಸಕೋಟೆ ತಾಲ್ಲೂಕು ತೆನೆಯೂರು ಗ್ರಾಮದ ಸರ್ವೆ ನಂ. 17ರಲ್ಲಿ 62 ಎಕರೆ, ಸರ್ವೆ ನಂ. 20ರಲ್ಲಿ 36 ಎಕರೆ ಶಿಡ್ಲಘಟ್ಟ ತಾಲ್ಲೂಕಿಗೆ ಸೇರಿದ ಬೈಲಸಂದ್ರ ಗ್ರಾಮದ ಸರ್ವೆ ನಂ. 56ರಲ್ಲಿ 113 ಎಕರೆ, ಕುರುಬರಹಳ್ಳಿ ಗ್ರಾಮದ ಸರ್ವೆ ನಂ. 38ರಲ್ಲಿ 53 ಎಕರೆ, ಒಂದರಲ್ಲಿ 297 ಎಕರೆ ಪ್ರದೇಶದಲ್ಲಿ ಹುಣಸೆ ನೆಡುತೋಪು ಬೆಳೆಸಲಾಗಿದೆ. ನೆಡುತೋಪುಗಳ ನಕಾಶೆಯನ್ನು ಲಗತ್ತಿಸಲಾಗಿದೆ ಎಂದು ಬರೆದಿದ್ದಾರೆ. ಊಟ ಆದ ಮೇಲೆ ಮುಂದುವರಿಸಿ ಎಂದರೆ ಆ ರೀತಿ ಮುಂದುವರಿಸುತ್ತೇನೆ.

ಶ್ರೀ ಡಿ.ಎನ್. ಜೀವರಾಜ್: ರೇವಣ್ಣನವರೆ, ಇವತ್ತು ಶುಕ್ರವಾರ.

ಅಧ್ಯಕ್ಷರು: ಈಗ ಸಮಯ ಮಧ್ಯಾಹ್ನ 2 ಗಂಟೆಯಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ: ಈ ಸರ್ಕಾರಕ್ಕೆ ದಾಖಲಾತಿ ಕೊಡದಿದ್ದರೆ ಕಷ್ಟ. ಇಲ್ಲದಿದ್ದರೆ, ಹೆಚ್ಚು ಕಡಿಮೆಯಾದರೆ, ನಮ್ಮ ಮೇಲೆಯೇ ಕೇಸ್ ಹಾಕುತ್ತಾರೆ. ಅದಕ್ಕೇ ನಿಮಗೆ ದಾಖಲಾತಿಗಳನ್ನು ಕೊಡುತ್ತಿದ್ದೇನೆ. ನೀವು ಹೇಗೆ ಹೇಳುತ್ತೀರೋ ಹಾಗೆ ಮಾಡುತ್ತೇನೆ. ಬೇಕಾದರೆ, 3 ಗಂಟೆಗೆ ಸೇರೋಣ ಎಂದರೆ ಆಗಲೇ ಮಾತನಾಡುತ್ತೇನೆ.

ಶ್ರೀ ಡಿ.ಎನ್. ಜೀವರಾಜ್: ರೇವಣ್ಣನವರಿಗೆ, ಇವತ್ತು ಶುಕ್ರವಾರ ಎನ್ನುವುದೇ ಮರೆತು ಹೋಗಿದೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಮುಖ್ಯಮಂತ್ರಿಯವರು, ರಾತ್ರಿ 8, 10 ಗಂಟೆಯಾಗಲಿ ಕೆಲವು important ವಿಷಯಗಳು ಚರ್ಚೆಯಾಗಲಿ ಎಂದು ಹೇಳಿದರು. ಮುಖ್ಯ ವಿಷಯವನ್ನು ನಾನು ಪ್ರಸ್ತಾಪಿಸುತ್ತಿದ್ದೇನೆ.

ಶ್ರೀ ಡಿ.ಎನ್. ಜೀವರಾಜ್: ರೇವಣ್ಣನವರು ನಮ್ಮನ್ನೆಲ್ಲ ಊರಿಗೆ ಕಳುಹಿಸಿ ಕೊಡಬೇಕು. ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಅವೆನ್ನೆಲ್ಲ speakerರವರಿಗೆ ಕೊಡಿ, ಅವರು ಅದನ್ನು ಸರ್ಕಾರದವರಿಗೆ ಕಳುಹಿಸಿ ಕೊಡುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ: ಮುಖ್ಯ ಸಚೇತಕರನ್ನು ನಾನು ಕೇಳುತ್ತಿರುವುದಿಷ್ಟೇ. ಇಂಥ ವಿಷಯದ ಮೇಲೆ ಬೆಳಕು ಚೆಲ್ಲಿ ಎಂದು ಮಾನ್ಯ ಸಭಾಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಾರೆ. ಅದಕ್ಕೆ ನಾನು ರಾಜ್ಯದ 5.5 ಕೋಟಿ ಜನರ ಪರವಾಗಿ ಸಭಾಧ್ಯಕ್ಷರೆ ನಿಮಗೆ ಅಭಿನಂದನೆ ಸಲ್ಲಿಸಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೆ, ತಾವು ಹೇಗೆ ಹೇಳುತ್ತೀರೋ ಹಾಗೆ ಮಾಡುತ್ತೇನೆ. ಇನ್ನೊಂದು ಅರ್ಧ ಗಂಟೆಯಲ್ಲಿ ನನ್ನ ಭಾಷಣ ಮುಗಿಸುತ್ತೇನೆ.

ಅಧ್ಯಕ್ಷರು: ಇನ್ನು 10 ನಿಮಿಷಗಳಲ್ಲಿ ಮುಗಿಸಲಿಕ್ಕಾಗುತ್ತದೆಯೇ?

ಶ್ರೀ ಹೆಚ್.ಡಿ. ರೇವಣ್ಣ: ಇನ್ನೊಂದು ಅರ್ಧ ಗಂಟೆಯಲ್ಲಿ ಮುಗಿಸುತ್ತೇನೆ. ಮುಂದೆ ನಾನು ಹೇಳಲಿರುವ ಅಂಶಗಳಲ್ಲೇ ಸ್ವಾರಸ್ಯ ಅಡಗಿದೆ.

ಅಧ್ಯಕ್ಷರು: ಮಾನ್ಯ ರೇವಣ್ಣನವರು ಈಗ ಪೀಠಿಕೆ ಹಾಕಿದ್ದಾರೆ. ಅವರು ಈಗಲೇ ಮುಗಿಸುವುದಿಲ್ಲ. ಮಾನ್ಯ ಜಯಚಂದ್ರರವರೆ, ಈ ಚರ್ಚೆಯನ್ನು ಸೋಮವಾರ ಮುಂದುವರೆಸೋಣವೇ?

ಶ್ರೀ ಟಿ.ಬಿ. ಜಯಚಂದ್ರ: ಚರ್ಚೆ ಮಾಡುವವರು ಅವರು. ಅವರು ಹೇಳಬೇಕು.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಇದನ್ನು ಸೋಮವಾರ ಮುಂದುವರೆಸೋಣವೆ?

ಶ್ರೀ ಹೆಚ್.ಡಿ. ರೇವಣ್ಣ: ನೀವು ಏನು ಹೇಳುತ್ತೀರೋ, ಅದಕ್ಕೆ ನಾನು ಬದ್ಧನಾಗಿರುತ್ತೇನೆ.

ಅಧ್ಯಕ್ಷರು: ಆಯಿತು, ಈ ಚರ್ಚೆಯನ್ನು ಸೋಮವಾರ ಮುಂದುವರೆಸೋಣ. ಈಗೊಂದು ಪ್ರಕಟಣೆ ಇದೆ. ಮನ್ಯ ಸಚಿವರಾದ ಕೃಷ್ಣ ಪಾಲೇಮಾರ್‌ರವರು ಇವತ್ತು ಮಧ್ಯಾಹ್ನ ಮಾನ್ಯ ಸಚಿವರು ಹಾಗೂ ಶಾಸಕರುಗಳ ಗೌರವಾರ್ಥ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಔತಣ ಕೂಟವನ್ನು ಏರ್ಪಾಡು ಮಾಡಿದ್ದಾರೆ. ಎಲ್ಲರೂ ದಯವಿಟ್ಟು ಅದರಲ್ಲಿ ಭಾಗವಹಿಸಬೇಕೆಂದು ಕೋರಿದೆ.

ಈಗ ಸದನವನ್ನು ಸೋಮವಾರ ಬೆಳಿಗ್ಗೆ 11 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.